
# ಪ್ರಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ

ಸಂಪುಟ : 37 ಸಂಚಿಕೆ : 21 ದುರ್ಮುಖಿ–ಜ್ಯೇಷ್ಠ ಕಲಿಯುಗಾಬ್ದ 5117 1–7–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ವಿಶ್ವದಂಗಳದಲ್ಲಿ ಭಾರತದ ಹೆಜ್ಜೆಗುರುತುಗಳು

ಇಂದಿನ ವೈಶ್ವಿಕ ಸನ್ನಿವೇಶದಲ್ಲಿ ಯಾವುದೇ ದೇಶವು ಇನ್ನೊಂದು ದೇಶದ ಮೇಲೆ ಅವಲಂಬಿಸದೇ, ಪರಸ್ಪರ ಸಹಕಾರವಿಲ್ಲದೇ, ಒಂದು ಇನ್ನೊಂದರ ಪ್ರಭಾವಕ್ಕೊಳಗಾಗದೇ ಸರ್ವಸ್ವತಂತ್ರವಾಗಿ ತನ್ನ ಆಗುಹೋಗುಗಳನ್ನು ನಿರ್ವಹಿಸುವುದು ಅಸಾಧ್ಯ. ಜಾಗತೀಕರಣವು ಆಳವಾಗುತ್ತಿರುವಂತೆ ತನ್ನ ಆಂತರಿಕ ನೀತಿಗಳನ್ನು ವೈಶ್ವಿಕ ಆಯಾಮದಲ್ಲಿ ನೋಡುವುದು, ಅದಕ್ಕನುಗುಣವಾಗಿ ತನ್ನ ವಿದೇಶೀ ನೀತಿಯನ್ನು ರೂಪಿಸುವುದು ಪ್ರತಿಯೊಂದು ದೇಶಕ್ಕೂ ಅನಿವಾರ್ಯ. ಅದರಲ್ಲೂ ಭಾರತದಂತಹ ಅಗಾದ ಜನಬಾಹುಳ್ಯ, ಸಾಮಾಜಿಕ ವೈವಿಧ್ಯ, ಭೌಗೋಳಿಕ ವಿಸ್ತಾರ, ಆರ್ಥಿಕ ಪ್ರಗತಿಯ ತುರ್ತು, ಹೊರದೇಶಗಳಿಗೆ ವಲಸೆ ಹೋದ ವಿಶಾಲ ಜನಸಮೂಹವುಳ್ಳ ದೇಶದಲ್ಲಿ ವಿದೇಶೀ ನೀತಿ ಸರಿಯಾದ ದಿಕ್ಕಿನಲ್ಲಿ ಸಾಗುವುದು ಅತ್ಯಂತ ಮಹತ್ವವಾಗಿದೆ.

ಬಾಹ್ಯ ವಾತಾವರಣವನ್ನು ರಾಷ್ಟ್ರೀಯ ಹಿತಾಸಕ್ತಿಗೆ ಅನುಕೂಲಕರವಾಗಿ ರೂಪಿಸಿಕೊಳ್ಳುವುದರ ಮೇಲೆ ಭಾರತದ ದೇಶೀಯ ಪ್ರಗತಿಯ ಪ್ರಯತ್ನದ ಯಶಸ್ಸು ಅವಲಂಬಿತವಾಗಿದೆ ಎನ್ನುವುದು ಪ್ರಥಮ ಪ್ರಧಾನಿ ನೆಹರು ಅವರಿಂದ ಹಿಡಿದು ಇದುವರೆಗೆ ದೇಶದ ಅಧಿಕಾರದ ಚುಕ್ಕಾಣಿ ಹಿಡಿದಿದ್ದ ಎಲ್ಲ ನೇತಾರರಿಗೂ ಅರ್ಥವಾಗಿದ್ದರೂ, ವಿಶ್ವದಲ್ಲಿ ಭಾರತದ ಪ್ರಭಾವ ಮತ್ತೆ ಮುಂಚೂಣಿಗೆ ಬರುವಂತೆ ವಿದೇಶಾಂಗ ವ್ಯವಹಾರವನ್ನು ನಿರೂಪಿಸುವಲ್ಲಿ ಇದುವರೆಗಿನ ಸರ್ಕಾರಗಳಿಗೆ ನಿರೀಕ್ಷಿತ ಯಶಸ್ಸು ದೊರಕಿರಲಿಲ್ಲ. ದೇಶದ ಆರ್ಥಿಕ ಸ್ಥಿತಿ ಮತ್ತು ಸಾಮಾಜಿಕ ಸ್ಥಿತಿಗಳ ಜೊತೆಗೆ ದೃಢ ನಿರ್ಧಾರ ಕೈಗೊಳ್ಳಬಲ್ಲ ಸಾಮರ್ಥ್ಯವುಳ್ಳ ನಾಯಕತ್ವದ ಕೊರತೆಯೂ ಇದಕ್ಕೆ ಕಾರಣವಿರಬಹುದು.

ಆದರೆ ಕಳೆದ ಎರಡು ವರ್ಷಗಳಲ್ಲಿ ಭಾರತದ ಬಗ್ಗೆ ಪ್ರಪಂಚದ ದೇಶಗಳ ಅಭಿಪ್ರಾಯದಲ್ಲಿ ಧನಾತ್ಮಕ ಧೋರಣೆ, ಬೇರೆ ಬೇರೆ ದೇಶಗಳು ಭಾರತದೊಡನೆ ಪರಸ್ಪರ ಸಹಕಾರ ಹಾಗೂ ವ್ಯವಹಾರ ವರ್ಧಿಸುವಲ್ಲಿ ತೋರಿಸುತ್ತಿರುವ ಆಸಕ್ತಿ, ವೈಶ್ವಿಕ ನಿರ್ಣಯಗಳಲ್ಲಿ ಭಾರತದ ಪಾತ್ರ, ಆರ್ಥಿಕ ಬೆಳವಣಿಗೆಯ ದರದಲ್ಲಿ ಪ್ರಥಮ ಸ್ಥಾನದಲ್ಲಿ ನಿಂತಿರುವ ಭಾರತಕ್ಕೆ ಹರಿದು ಬರುತ್ತಿರುವ ಬಂಡವಾಳ ಹೂಡಿಕೆಗಳು, ವಿಶ್ವದೆಲ್ಲೆಡೆ ಹರಡಿರುವ ಭಾರತೀಯ ಮೂಲದ ಜನರಲ್ಲಿ ಮಾತೃದೇಶದ ಕುರಿತು ಹೆಚ್ಚುತ್ತಿರುವ ಪ್ರೀತಿ–ಇವನ್ನೆಲ್ಲ ಗಮನಿಸಿದಾಗ ವಿಶ್ವದ ದೊಡ್ಡಣ್ಣನಾಗಿ ಮೆರೆಯುತ್ತಿರುವ ಅಮೆರಿಕ ಮತ್ತು ಅದರೊಂದಿಗೆ ಪೈಪೋಟಿಗಿಳಿದಿರುವ ಚೀನಾ ದೇಶಗಳ ನಡುವೆ ಮುನ್ನಡೆಯುತ್ತಿರುವ ಶಕ್ತಿಯಾಗಿ (leading power) ಭಾರತ ರೂಪುಗೊಳ್ಳುತ್ತಿದೆ.

### ಆರಂಭದ ಹೆಜ್ಜೆಗಳು

ಹೊಸ ಸರ್ಕಾರದ ಪ್ರಮಾಣವಚನ ಸಮಾರಂಭಕ್ಕೆ ಸಾರ್ಕ್ ದೇಶದ ಪ್ರಮುಖರಿಗೆ ಆಹ್ವಾನ ತನ್ಮೂಲಕ ನೆರೆಹೊರೆಯ ಸಂಬಂಧ ವರ್ಧನೆಗೆ ನಾಂದಿ. ಪ್ರಧಾನಿಯಾದ ಬಳಿಕ ನರೇಂದ್ರ ಮೋದಿ ತಮ್ಮ ಮೊದಲ ವಿದೇಶಿ ಯಾತ್ರೆಗಾಗಿ ಭೂತಾನ್ ದೇಶದ ಪ್ರವಾಸ ಕೈಗೊಂಡಿದ್ದು, ದಕ್ಷಿಣ ಏಷ್ಯಾ ದೇಶಗಳ ನೇತೃತ್ವ ವಹಿಸುವ ಭಾರತದ ಇರಾದೆಯನ್ನು ತೋರಿಸುತ್ತದೆ.

ದಶಕಗಳಿಂದ ನೆನೆಗುದಿಗೆ ಬಿದ್ದಿದ್ದ ಬಾಂಗ್ಲಾದೇಶದ ಗಡಿವಿವಾದ ಮತ್ತು ವಸತಿಗಳ ವಿನಿಮಯ ವಿವಾದವನ್ನು ಬಗೆಹರಿಸಿದ್ದು ಬಹು ದೊಡ್ಡ ಸಾಧನೆ.



### ವಿವಿಧ ದೇಶಗಳ ಸಂಬಂಧ ಮತ್ತು ಸಹಕಾರ ವೃದ್ಧಿ

ಭಾರತ ಸರ್ಕಾರದ ಸಕ್ರಿಯ ವಿದೇಶೀ ನೀತಿಯಿಂದಾಗಿ ವಿವಿಧ ದೇಶಗಳ ಸಖ್ಯದಲ್ಲಿ ಲಾಭವಾಗಿದ್ದು ಕೇವಲ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಮಾತ್ರವಲ್ಲ ರಕ್ಷಣೆ, ಮಿಲಿಟರಿ ಸಹಕಾರ, ಸಾಮಾಜಿಕ ಅಭಿವೃದ್ಧಿಯ ವಿಷಯಗಳಲ್ಲೂ ಗಣನೀಯ ಅನುಕೂಲವಾಗಿದೆ.

ವ್ಯಾಪಾರಿ ಜಗತ್ತಿನಲ್ಲಿ ಭಾರತದ ಬಗ್ಗೆ ಧನಾತ್ಮಕ ಧೋರಣೆ ಬೆಳೆದ ಪರಿಣಾಮ ಬಂಡವಾಳದ ಹೂಡಿಕೆಯ ಹರಿವು ಹೆಚ್ಚಾಗಿದ್ದು ಇಂದು ಭಾರತ ಅತಿಹೆಚ್ಚು ವಿದೇಶೀ ಬಂಡವಾಳ ಹೂಡಿಕೆಯಾಗುವ ದೇಶಗಳ ಸಾಲಿನಲ್ಲಿ ಮುಂಚೂಣಿಯಲ್ಲಿ ನಿಂತಿದೆ. ಹಾಗೆಯೇ ಆರ್ಥಿಕ ಅಭಿವೃದ್ಧಿ ದರದಲ್ಲಿ ಅತಿಹೆಚ್ಚು ವೇಗದಲ್ಲಿ ಬೆಳೆಯುತ್ತಿರುವ ಆರ್ಥಿಕತೆಯಾಗಿ ಹೊರಹೊಮ್ಮಿದೆ.

ಜಪಾನ್ ದೇಶ ಮುಂಬೈ–ಅಹಮದಾಬಾದ್ ಹೈಸ್ಪೀಡ್ ರೈಲ್ವೇ ಯೋಜನೆ ಸೇರಿದಂತೆ ಅಪಾರ ಪ್ರಮಾಣದಲ್ಲಿ ಹೂಡಿಕೆ ಮಾಡಿದೆ. ಹಾಗೆಯೇ ಫ್ರಾನ್ಸ್ ಸ್ಮಾರ್ಟ್ ಸಿಟಿಗಳ ನಿರ್ಮಾಣದಲ್ಲಿ ಸಹಕಾರ ನೀಡಲಿದೆ. ಅಮೆರಿಕ ದೇಶದೊಂದಿಗೆ ರಕ್ಷಣಾ ಸಂಬಂಧಿತ ವ್ಯವಹಾರದಲ್ಲಿ ವೇಗದಲ್ಲಿ ಪ್ರಗತಿಯಾಗುತ್ತಿದ್ದು ಪರಿಣಾಮವಾಗಿ ಹಿಂದೂ ಮಹಾಸಾಗರ ಮತ್ತು ಸುತ್ತಲಿನ ಪ್ರದೇಶದ ರಕ್ಷಣೆಯ ವಿಷಯದಲ್ಲಿ ಭಾರತ ಪ್ರಮುಖ ಶಕ್ತಿಯಾಗಿ ಹೊರಹೊಮ್ಮಲಿದೆ. ಮೇಕ್ ಇನ್ ಇಂಡಿಯಾದ ಅಡಿಯಲ್ಲಿ ಭಾರತದಲ್ಲಿ ಯುದ್ಧ ವಿಮಾನಗಳನ್ನು ತಯಾರಿಸಲು ಬೋಯಿಂಗ್ ಮುಂತಾದ ಸಂಸ್ಥೆಗಳು ಮಾತುಕತೆ ನಡೆಸಿವೆ. ಭಾರತದ ಸಾಂಸ್ಕೃತಿಕ ಪ್ರಭಾವಕ್ಕೊಳಗಾಗಿರುವ ಪೂರ್ವದ ದೇಶಗಳ ಸಂಬಂಧ ಇನ್ನೂ ನಿಕಟವಾಗಿದೆ.

ಇತ್ತೀಚೆಗೆ ಅಫಘಾನಿಸ್ತಾನ್‌ಕ್ಕೆ ಭೇಟಿ ನೀಡಿದ ಮೋದಿ ಹೇರತ್ ಪ್ರದೇಶದಲ್ಲಿ ಭಾರತದ ಸಹಕಾರದಲ್ಲಿ ನಿರ್ಮಿಸಿದ ಸಲ್ಮಾ ಅಣೆಕಟ್ಟನ್ನು ಅಫಘಾನಿಸ್ತಾನಕ್ಕೆ ಅರ್ಪಿಸಿದರು. 42ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯವಿರುವ ಈ ಅಣೆಕಟ್ಟು 75

### ಭಾರತೀಯ ಮೂಲದ ವಲಸಿಗರು

2015ರ ಏಪ್ರಿಲ್ ತಿಂಗಳಿನಲ್ಲಿ ಯೆಮೆನ್ ದೇಶದಲ್ಲಿ ಸೌದಿ ಅರೇಬಿಯಾ ಮತ್ತು ಮಿತ್ರದೇಶಗಳು ಸೈನಿಕ ಕಾರ್ಯಾಚರಣೆ ನಡೆಸಿದ ಸಂದರ್ಭದಲ್ಲಿ ನಿರಾಶ್ರಿತರಾದ ಭಾರತೀಯ ಮೂಲದ ನಾಲ್ಕೂವರೆ ಸಾವಿರಕ್ಕೂ ಹೆಚ್ಚು ಜನರು ಮತ್ತು ನಲವತ್ತೊಂದು ದೇಶಗಳ ಒಂಭೈನೂರಕ್ಕೂ ಹೆಚ್ಚು ಜನರನ್ನು ಭಾರತ ರಕ್ಷಿಸಿತು. 'ಆಪರೇಶನ್ ರಾಹತ್' ಹೆಸರಿನಲ್ಲಿ ಯುದ್ಧಪ್ರದೇಶದಿಂದ ಜನರನ್ನು ಸಂರಕ್ಷಿಸುವ ಇಂತಹ ಅಪಾಯಕಾರಿ ಕಾರ್ಯಾಚರಣೆ ನಡೆಸುವ ಎದೆಗಾರಿಕೆ ತೋರಿದ ಭಾರತೀಯ ಸೇನೆ ವಿಶ್ವದ ಶ್ಲಾಘನೆಗೆ ಪಾತ್ರವಾಯಿತು. ಅಮೆರಿಕ ಹಾಗೂ ಯೂರೋಪಿನ ಬೇರೆ ಬೇರೆ ದೇಶಗಳೂ ತಮ್ಮ ದೇಶದ ನಾಗರಿಕರ ರಕ್ಷಣೆಗಾಗಿ ಭಾರತವನ್ನು ಕೇಳಿಕೊಂಡವು.

ಅಷ್ಟೇ ಅಲ್ಲದೇ ಪ್ರಪಂಚದ ಯಾವುದೇ ಮೂಲೆಯಲ್ಲಿ ಭಾರತೀಯ ಮೂಲದ ಜನರ ಸಂಕಷ್ಟದಲ್ಲಿರುವ ಸಹಾಯಕ್ಕೆ ವಿದೇಶಾಂಗ ವ್ಯವಹಾರಗಳ ವಿಭಾಗವು ತ್ವರಿತವಾಗಿ ಹಾಗೂ ಧನಾತ್ಮಕವಾಗಿ ಸ್ಪಂದಿಸಿರುವ ಅನೇಕ ಘಟನೆಗಳು ಮಾಧ್ಯಮದಲ್ಲಿ ವರದಿಯಾಗಿವೆ.

ಪ್ರಧಾನಿ ಮೋದಿ ಪ್ರತಿಯೊಂದು ದೇಶಕ್ಕೆ ಭೇಟಿ ನೀಡಿದಾಗಲೂ ಅಲ್ಲಿ ನೆಲೆಸಿರುವ ಭಾರತೀಯ ಮೂಲದ ಜನರು ಅಭೂತಪೂರ್ವ ಸ್ವಾಗತ ನೀಡುತ್ತಿದ್ದು ಅವರ ಭಾರತಪ್ರೇಮದಲ್ಲಿ ಹೊಸ ಹುಮ್ಮಸ್ಸು ಕಾಣುತ್ತಿದೆ.

### ವಿಶ್ವದಲ್ಲಿ ಭಾರತೀಯ ವಿಚಾರಗಳಿಗೆ ಮನ್ನಣೆ

ಮಾಹಿತಿ ತಂತ್ರಜ್ಞಾನದಲ್ಲಿ ಭಾರತ ಮುಂಚೂಣಿಯಲ್ಲಿರುವಂತೆಯೇ, ಯೋಗ, ಆಯುರ್ವೇದಗಳಿಗೆ ವೈಶ್ವಿಕ ಮನ್ನಣೆ ದೊರೆತಿದೆ. ಪ್ರಧಾನಿ ಮೋದಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾತನಾಡುತ್ತ ಕರೆನೀಡಿದ ಜೂನ್ 21ರಂದು ಅಂತಾರಾಷ್ಟ್ರೀಯ ಯೋಗ ದಿನದ ಆಚರಣೆ ಮಾಡುವ ಪ್ರಸ್ತಾವಕ್ಕೆ ನೂರೈವತ್ತಕ್ಕೂ ಹೆಚ್ಚು ದೇಶಗಳು ಬೆಂಬಲ ಸೂಚಿಸಿದ್ದು ಕಳೆದ ವರ್ಷ ವಿಶ್ವದೆಲ್ಲೆಡೆ ಯೋಗದ ವಾತಾವರಣ ಹರಡಿದೆ. ಅಷ್ಟೇ ಉತ್ಸಾಹ ಈ ವರ್ಷವೂ ಕಾಣುತ್ತಿದೆ. ಹಾಗೆಯೇ ಹೆಚ್ಚು ಹೆಚ್ಚು ವಿದೇಶೀ ಮೂಲದ ಜನರು ಭಾರತೀಯ ಜೀವನಶೈಲಿಯತ್ತ ಆಕರ್ಷಿತರಾಗುತ್ತಿದ್ದಾರೆ.

ಭಯೋತ್ಪಾದನೆ ವಿಷಯದಲ್ಲಿ ದೃಢವಾದ ಕ್ರಿಯಾತ್ಮಕ ಅಭಿಪ್ರಾಯ ರೂಪಿಸುವುದು, ಹವಾಮಾನ ಬದಲಾವಣೆ, ಸೈಬರ್ ಅಪರಾಧಗಳು, ನ್ಯೂಕ್ಲಿಯರ್ ಎನರ್ಜಿ ವಿಷಯಗಳ ನೀತಿರೂಪಿಸುವಲ್ಲಿ ಸಕ್ರಿಯ ಪಾತ್ರವಹಿಸಿದುದು, ವಿಶ್ವಸಂಸ್ಥೆಯ ಸುಧಾರಣೆಗಳು, ವಿಶ್ವ ವ್ಯಾಪಾರ ಸಂಸ್ಥೆ (WTO) ಮುಂತಾದ ವಿಷಯಗಳಲ್ಲಿ ಭಾರತ ಪ್ರಮುಖ ಧ್ವನಿಯಾಗಿ ಹೊರಹೊಮ್ಮಿದೆ.

ಸೋಲಾರ ಶಕ್ತಿಯ ಬಳಕೆಯ ಕುರಿತು ಸಂಶೋಧನೆ ನಡೆಸುವ ನೂರಕ್ಕೂ ಹೆಚ್ಚು ದೇಶಗಳು ಹಾಗೂ ಅನೇಕ ಬಹುರಾಷ್ಟ್ರೀಯ ಕಂಪೆನಿಗಳು ಸದಸ್ಯರಾಗಿರುವ ಗುಂಪಿಗೆ ಭಾರತ ನೇತೃತ್ವ ವಹಿಸಿದೆ.

ಅಫಘಾನಿಸ್ತಾನ, ಬಾಂಗ್ಲಾದೇಶ, ಮಂಗೋಲಿಯ, ನೇಪಾಳ, ಭೂತಾನ್ ಮುಂತಾದ ನೆರೆ ಹೊರೆಯ ದೇಶಗಳ ಅಭಿವೃದ್ಧಿಯಲ್ಲಿ ನೆರವಾಗುವ ಮೂಲಕ ಪ್ರಾದೇಶಿಕ ಅಭಿವೃದ್ಧಿಗೆ ಒತ್ತು ನೀಡಿದೆ.

ಸಾವಿರ ಹೆಕ್ಟೇರಿನಷ್ಟು ಭೂಮಿಯನ್ನು ನೀರಾವರಿಗೆ ತರುತ್ತದೆ. ಹಾಗೆಯೇ ಇರಾನ್ ಪ್ರವಾಸದ ವೇಳೆ ಚಬಹರ್ ಬಂದರನ್ನು ಅಭಿವೃದ್ಧಿಪಡಿಸುವ ತ್ರಿಪಕ್ಷೀಯ ಒಪ್ಪಂದಕ್ಕೆ ಸಹಿ ಹಾಕಿದರು. ಈ ಬಂದರು ಅಫಘಾನಿಸ್ತಾನಕ್ಕೆ ಇರಾನಿನ ಮುಖಾಂತರ ಸಮುದ್ರಕ್ಕೆ ಸಂಪರ್ಕ ಕಲ್ಪಿಸುತ್ತದೆ. ಹಾಗೆಯೇ ಭಾರತಕ್ಕೆ ಮಧ್ಯ ಏಷಿಯಾ ದೇಶಗಳಿಗೆ ಸಂಪರ್ಕ ಕಲ್ಪಿಸುತ್ತದೆ.

ಪೃಥ್ವಿಯ ಮೇಲೆ ಕ್ಷಿಪಣಿಗಳ ಹರಡುವಿಕೆಯನ್ನು ನಿಯಂತ್ರಿಸುವ ಮಿಸ್ಸೈಲ್ ಟೆಕ್ನಾಲಜಿ ಕಂಟ್ರೋಲ್ ಗ್ರೂಪ್‌ನ ಮೂವತ್ತೈದನೇ ಸದಸ್ಯ ರಾಷ್ಟ್ರವಾಗಿ ಭಾರತ ಸೇರ್ಪಡೆಯಾಗಿದೆ. ಇದು ಪರಮಾಣು ಇಂಧನವನ್ನು ಪೂರೈಸುವ ನ್ಯೂಕ್ಲಿಯರ್ ಎನರ್ಜಿ ಸಪ್ಲೆಯರ್ ಸಮೂಹಕ್ಕೆ ಭಾರತ ಸೇರ್ಪಡೆಯಾಗಲು ಹತ್ತಿರವಾದಂತೆ. ಮುಂದುವರಿದು ನ್ಯೂಕ್ಲಿಯರ್ ಸಮೂಹಕ್ಕೆ ಭಾರತವನ್ನು ಸೇರಿಸಿಕೊಳ್ಳಲು ಅಮೆರಿಕಾ, ರಷ್ಯಾ, ಯುನೈಟೆಡ್ ಕಿಂಗ್‌ಡಮ್, ಮೆಕ್ಸಿಕೋ, ಸ್ವಿಟ್ಜರಲೆಂಡ್ ಮೊದಲಾದ ಅನೇಕ ಸದಸ್ಯ ರಾಷ್ಟ್ರಗಳು ಬೆಂಬಲ ಸೂಚಿಸಿವೆ.

## ವಿದೇಶಾಂಗ ನೀತಿಯ ಚಾಲಕ ಪ್ರಧಾನಿ ನರೇಂದ್ರ ಮೋದಿ



ಕಳೆದ ಎರಡು ವರ್ಷಗಳ ಅವಧಿಯಲ್ಲಿ ನಲವತ್ತಕ್ಕೂ ಹೆಚ್ಚು ಬಾರಿ ವಿದೇಶಿ ಪ್ರವಾಸಗಳನ್ನು ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಪ್ರತಿಯೊಂದು ಭೇಟಿಯಲ್ಲೂ ವೈಶ್ವಿಕ ವಾತಾವರಣವನ್ನು ಭಾರತದ ಪರವಾಗಿ ರೂಪಿಸಲು ಕೇಂದ್ರಿಕರಿಸಿದ್ದಾರೆ. ಪ್ರತಿ ಬಾರಿಯ ವಿದೇಶಿ ಪ್ರವಾಸದಲ್ಲೂ ಮೂರು ನಾಲ್ಕು ದೇಶಗಳಿಗೆ ಭೇಟಿ ನೀಡುತ್ತಿರುವ ಪ್ರಧಾನಿ ದಿನಪೂರ್ತಿ ಬಿಡುವಿರದ ಕಾರ್ಯಕ್ರಮಗಳಲ್ಲಿ ತೊಡಗುತ್ತಾರೆ. ಅಗತ್ಯಬಿದ್ದರೆ ಮಾತ್ರ ಭೇಟಿ ನೀಡಿದ ದೇಶದಲ್ಲಿ ರಾತ್ರಿ ತಂಗುವ ಮೋದಿ, ಸಮಯ ಉಳಿಸುವ ಸಲುವಾಗಿ ರಾತ್ರಿ ಪ್ರಯಾಣ ಮಾಡುತ್ತಾರೆ. ಮಾರಿಶಸ್, ಸಿಚೆಲೆಸ್‌ನಂತಹ ಪುಟ್ಟ ದೇಶಗಳಿಗೂ ಪ್ರಧಾನಿ ಭೇಟಿ ನೀಡಿದರು. ಮಾರ್ಚ್ 2015ರ ಶ್ರೀಲಂಕಾ ಭೇಟಿ 1987ರ ನಂತರ ಭಾರತದ ಪ್ರಧಾನಿಯ ಮೊದಲ ಶ್ರೀಲಂಕಾ ಪ್ರವಾಸವಾಗಿತ್ತು. 2015 ಏಪ್ರಿಲ್ ತಿಂಗಳ ಕೆನಡಾ ಭೇಟಿ 42 ವರ್ಷಗಳ ನಂತರ ಭಾರತೀಯ ಪ್ರಧಾನಿಯ ಪ್ರವಾಸವಾಗಿತ್ತು.

ಪ್ರತಿಯೊಂದು ದೇಶಕ್ಕೆ ಭೇಟಿ ನೀಡಿದಾಗಲೂ ಅಲ್ಲಿ ನೆಲೆಸಿರುವ ಭಾರತೀಯ ಮೂಲದ ಜನರನ್ನು ಭೇಟಿಯಾಗಲು ಎಂದೂ ಮರೆಯುವುದಿಲ್ಲ. ಅಮೆರಿಕದ ಮ್ಯಾಡಿಸನ್ ಸ್ಕ್ವೇರ್ ಗಾರ್ಡನ್‌ನ ಅಭೂತಪೂರ್ವ ಸ್ವಾಗತದಿಂದ ಹಿಡಿದು ಇತ್ತೀಚೆಗೆ ಸೌದಿ ಅರೇಬಿಯಾಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿ ಕೆಲಸಕ್ಕಾಗಿ ವಲಸೆ ಹೋದ ಕೂಲಿ ಕಾರ್ಮಿಕರೊಂದಿಗೆ ಉಪಹಾರ ಸೇವಿಸುವವರೆಗೆ ಮೋದಿಯವರ ಭಾರತೀಯ ಜನರ ಪ್ರೇಮ ಸಾಗಿದೆ.

ಮೊದಲು ಭಾರತದ ರಾಷ್ಟ್ರಪತಿ, ಪ್ರಧಾನಿ ವಿದೇಶೀ ಯಾತ್ರೆಗೆ ಹೋದಾಗ ಪಾಶ್ಚಾತ್ಯ ಉಡುಗೆಯಾದ ಟೈ ಕೋಟ್‌ಗಳನ್ನು ಅಥವಾ ಬಂದ್‌ಗಲಾವನ್ನು ಧರಿಸುವುದು ಸಾಮಾನ್ಯವಾಗಿತ್ತು. ಆದರೆ ಈ ಪದ್ಧತಿಯನ್ನು ಮುರಿದಿರುವ ಮೋದಿ ವಿದೇಶಿ ನೆಲದಲ್ಲೂ ಭಾರತೀಯ ಉಡುಗೆಯನ್ನೇ ತೊಡುತ್ತಾರೆ. ಇತ್ತೀಚೆಗೆ ಅಮೆರಿಕದ ಕಾಂಗ್ರೆಸ್‌ನಲ್ಲಿ ಭಾಷಣ ಮಾಡುವಾಗಲೂ ಮೋದಿ ಎಂದಿನಂತೆ ಕುರ್ತಾ ಜಾಕೇಟ್‌ನಲ್ಲಿ ಕಂಗೊಳಿಸಿದರು.

ಉಪನಿಷತ್ತಿನಲ್ಲಿ ಹೇಳಿದ "ವಸುಧೈವ ಕುಟುಂಬಕಮ್" ಇಡೀ ವಿಶ್ವವೇ ಒಂದು ಕುಟುಂಬ ಎನ್ನುವ ಆದರ್ಶ ಭಾರತದ ವಿದೇಶ ವ್ಯವಹಾರವನ್ನು ನಿರ್ದೇಶಿಸಬೇಕು. ಈ ವಾಕ್ಯವನ್ನು ಪ್ರಧಾನಿ ಮೋದಿ ಅನೇಕ ಬಾರಿ ತಮ್ಮ ಭಾಷಣಗಳಲ್ಲಿ ಹೇಳಿದ್ದಾರೆ. ಜಗದ ಮಾತೆಯಾಗಿದ್ದ ಪ್ರಾಚೀನ ಭಾರತ ಜ್ಞಾನದ ಬೆಳಕನ್ನು ಪ್ರಪಂಚಕ್ಕೆ ನೀಡಿತ್ತು. ಇಂದು ಪ್ರಮುಖ ಶಕ್ತಿಯಾಗಿ ಪುನಃ ಹೊರಹೊಮ್ಮುವತ್ತ ಮುನ್ನಡೆಯುತ್ತಿರುವ ಭಾರತ ವಿಶ್ವಶಾಂತಿಯನ್ನು ಸ್ಥಾಪಿಸಿ ಮಾನವತೆಯ ಪ್ರಗತಿಯನ್ನು ನಿರ್ದೇಶಿಸುವತ್ತ ಸಾಗಲಿ. ●



ಬಿಹಾರದ ನಳಂದ ಜಿಲ್ಲೆಯ ಕುಗ್ರಾಮ ದರ್ವೇಶಪುರದ ಯುವ ರೈತ ಸುಮಂತ್ ಕುಮಾರ್ ಸಾವಯವ ಕೃಷಿ ಪದ್ಧತಿಯಿಂದ ದಾಖಲೆ ಇಳುವರಿ ಪಡೆದಿದ್ದಾರೆ. ಯಾವುದೇ ಸಸ್ಯನಾಶಕಗಳನ್ನು ಬಳಸದೇ ಸಂಪೂರ್ಣ ಸಾವಯವ ಪದ್ಧತಿಯಲ್ಲಿ ತನ್ನ 1 ಹೆಕ್ಟೇರ್ ಕೃಷಿ ಭೂಮಿಯಲ್ಲಿ 22.4 ಟನ್ ಭತ್ತ ಬೆಳೆದ ಹೆಗ್ಗಳಿಕೆ ಇವರದ್ದು. ಈ ಅಪರೂಪದ ಸಾಧನೆಯಿಂದ 1 ಹೆಕ್ಟೇರ್ ಪ್ರದೇಶದಲ್ಲಿ 19.4 ಟನ್ ಭತ್ತ ಬೆಳೆದ ಚೀನೀ ಕೃಷಿ ವಿಜ್ಞಾನಿ, 'ಫಾದರ್ ಆಫ್ ರೈಸ್' ಎಂಬ ಹೆಗ್ಗಳಿಕೆ ಪಡೆದಿರುವ ಯುವಾನ್ ಲಾಂಗ್ ಪಿಂಗ್ ಅವರ ದಾಖಲೆಯನ್ನು ಮೀರಿಸಿದ್ದಾರೆ. ಸುಮಂತ್ ಮಾರ್ಗದರ್ಶನದಲ್ಲಿ ದರ್ವೇಶಪುರದ ಸ್ನೇಹಿತರು 17ಟನ್ ಬೆಳೆದಿದ್ದು, ಇದೀಗ ಇತರರು ಸುಮಂತ್ ಮಾರ್ಗದರ್ಶನದಲ್ಲಿ ತಮ್ಮ ಎಂದಿನ ಇಳುವರಿಯ ಎರಡರಷ್ಟು ಇಳುವರಿ ಪಡೆಯುತ್ತಿದ್ದಾರೆ. ಸಮರ್ಥವಾಗಿ ಬಡತನದ ವಿರುದ್ಧ ಹೋರಾಟ ನಡೆಸುತ್ತಿರುವ ದರ್ವೇಶಪುರದ ಹಳ್ಳಿಯ ಜನರ ಜೀವನ ಸುಧಾರಿಸುತ್ತಿದೆ. 2013ರಲ್ಲಿ ಈ ಹಳ್ಳಿಗೆ ಭೇಟಿ ನೀಡಿದ ನೋಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಜೋಸೆಫ್ ಸ್ಟಿಗ್ಲಿಟ್ಸ್, ಸಾವಯವ ಕೃಷಿ ಪದ್ಧತಿಯ ಇಳುವರಿಯನ್ನು ಕಂಡು, 'ಇಲ್ಲಿಯ ರೈತರು ಯಾವುದೇ ವಿಜ್ಞಾನಿಗಳಿಗಿಂತ ಹೆಚ್ಚಿನವರು' ಎಂದರು.

## ಮೊಬೈಲಿನಿಂದ ಕಣ್ಣುರಿಯೇ?




ಜಾಸ್ತಿ ಹೊತ್ತು ಮೊಬೈಲ್ ನೋಡುತ್ತಿರುತ್ತೀರಾ? ದಿನವಿಡೀ ವಿಡಿಯೋ, ಚಾಟಿಂಗ್, ಗೇಮ್ ಒಳ್ಳೆಯದಲ್ಲ. ಅದು ನಿಮ್ಮ ಕಣ್ಣಿಗೆ ತಾತ್ಕಾಲಿಕ ದಣಿವು ಹಾಗೂ ಶಾಶ್ವತ ಹಾನಿ ಎರಡನ್ನೂ ಉಂಟುಮಾಡಬಹುದು. ನೀವು ಅಂತಹ ಅಭ್ಯಾಸ ಹೊಂದಿದ್ದರೆ ಅದನ್ನು ಕಡಿಮೆ ಮಾಡಲು ಪ್ರಯತ್ನಿಸಿ.

ಆದರೆ ಈಗಿನ ಜೀವನಕ್ರಮದಲ್ಲಿ ಕೆಲವರಿಗೆ ಮೊಬೈಲ್ ಬಳಸುತ್ತಲೇ ಇರುವುದು ಅನಿವಾರ್ಯವಾಗಿರುತ್ತದೆ. ಬಹಳ ಹೊತ್ತು ಮೊಬೈಲ್ ನೋಡುತ್ತಿರುವುದು ಅನಿವಾರ್ಯವಾದಲ್ಲಿ ಈ ಅಭ್ಯಾಸಗಳನ್ನು ರೂಢಿಸಿಕೊಳ್ಳಿ

- ಕಣ್ಣು ಮಿಟುಕಿಸುತ್ತಿರಿ. ಇದು ಕಣ್ಣನ್ನು ಶುಷ್ಕವಾಗುವುದರಿಂದ ರಕ್ಷಿಸುತ್ತದೆ. ನೀವು ಹೆಚ್ಚು ಹೊತ್ತು ಒಂದೇ ಕಡೆಗೆ ದೃಷ್ಟಿ ಹರಿಸುತ್ತಿದ್ದರೆ ಕಣ್ಣಿನ ನೀರಿನಂಶ ಆರುತ್ತದೆ. ಇದರಿಂದ ಕಣ್ಣು ಮಬ್ಬಾಗಬಹುದು ಮತ್ತು ಕಣ್ಣಿನ ಪರದೆಗೆ ಹಾನಿಯಾಗಬಹುದು.
- ನಿಮ್ಮ ಮೊಬೈಲಿನ ಪರದೆ Corning Gorilla Glass ಹೊಂದಿದೆ ಎಂದು ಬರೆದಿಲ್ಲವಾದಲ್ಲಿ Anti glare ಕವಚವನ್ನು ಹಾಕಿಕೊಳ್ಳುವುದು ಒಳಿತು. ಮೊಬೈಲ್ ವಿಕಿರಣಗಳಿಂದ ಇದು ನಿಮ್ಮ ಕಣ್ಣನ್ನು ರಕ್ಷಿಸುತ್ತದೆ.
- ಬ್ರೇಕ್ ತೆಗೆದುಕೊಳ್ಳಿ. ಮೊಬೈಲನ್ನು ತುಂಬಾ ಹೊತ್ತು ನೋಡುತ್ತಿರಬೇಕಾದ ಸಂದರ್ಭವಿದ್ದರೆ, ಆಗಾಗ ಬ್ರೇಕ್ ತೆಗೆದುಕೊಳ್ಳಿ. ಒಮ್ಮೆ ಮುಖಕ್ಕೆ ನೀರು ಸಿಂಪಡಿಸಿ ಮತ್ತೆ ಕುಳಿತರೆ ಆಹ್ಲಾದಕರವಾಗುತ್ತದೆ.
- ಮೊಬೈಲಿನ ಪರದೆಯ ಪ್ರಕಾಶವನ್ನು ಕಡಿಮೆ ಮಾಡಲು ಅವಕಾಶ ಕೊಟ್ಟಿರುತ್ತಾರೆ. ಸಾಮಾನ್ಯ ಬೆಳಕಿರುವ ಪ್ರದೇಶಗಳಲ್ಲಿ, ನೆರಳಿನಲ್ಲಿದ್ದರೆ ಅದನ್ನು ಆದಷ್ಟು ಕಡಿಮೆಗೊಳಿಸಿ. ತೀಕ್ಷ್ಣ ಕಿರಣಗಳು ಹೆಚ್ಚು ಅಪಾಯಕಾರಿ.
- ಕಣ್ಣಿಗೆ ತೀರಾ ಹತ್ತಿರವಿಟ್ಟು ಮೊಬೈಲ್ ಬಳಸಬೇಡಿ. ಇದರಿಂದಾಗಿ ಕಣ್ಣಿಗೆ ಹೆಚ್ಚು ದಣಿವಾಗುತ್ತದೆ. ಒಂದೂವರೆ ಅಡಿಯಷ್ಟಾದರೂ ದೂರ ಕಾಯ್ದುಕೊಳ್ಳಿ.
- ಮೊಬೈಲ್ ಸೆಟ್ಟಿಂಗ್ ಬಳಸಿ ಅಕ್ಷರಗಳ ಗಾತ್ರವನ್ನು ನಿಮಗೆ ಓದಲು ಸಲೀಸಾಗುವಷ್ಟು ಗಾತ್ರದಲ್ಲಿ ಅಳವಡಿಸಿ. ಅತಿ ಚಿಕ್ಕ ಅಕ್ಷರಗಳನ್ನು ಓದುವಾಗಲೂ ಕಣ್ಣಿಗೆ ಹೆಚ್ಚು ಶ್ರಮವಾಗುತ್ತದೆ. ಮೊಬೈಲ್ ರೆಸೊಲೊಷನ್ ಹೆಚ್ಚಿದ್ದರೆ ಕಣ್ಣಿಗೆ ಉತ್ತಮ. ಫೋನ್ ಖರೀದಿಸುವಾಗ ಇದನ್ನೂ ಗಮನಿಸಿಕೊಳ್ಳಿ.

ಈ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವ ಮೂಲಕ ನೀವು ನಿಮ್ಮ ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ನಿಮ್ಮ ಕಣ್ಣಿಗೆ ಕಡಿಮೆ ದಣಿವಾಗುವುದರಿಂದ ನೀವು ಹೆಚ್ಚು ಲವಲವಿಕೆಯಿಂದಿರಲು ಸಾಧ್ಯ.

# ಕಾಡು ಉಳಿಸುವ ಕಾಯಕ ಯೋಗಿ

ನೆಲದ ಮಾತು

ಇಲ್ಲೊಬ್ಬ ಪರಿಸರ ಪ್ರೇಮಿ ಅರಣ್ಯ ಉಳಿಸಲು ಸದ್ದಿಲ್ಲದೆ 'ನೀರು ಹೊರುವ ಸೇವೆ' ಮಾಡುತ್ತಿದ್ದಾರೆ. ಬಿರು ಬೇಸಿಗೆಯ ಹೊಡೆತಕ್ಕೆ ಸಸಿಗಳು ಒಣಗಿ ಹೋಗದಂತೆ ಅವುಗಳಿಗೆ ನೀರುಣಿಸುವ ಕಾಯಕದಲ್ಲಿ ತೊಡಗಿದ್ದಾರೆ. ಅವರ ಪ್ರಯತ್ನದ ಫಲವಾಗಿ ಶ್ರೀರಂಗಪಟ್ಟಣ ಸಮೀಪ ಕರಿಘಟ್ಟ ಅರಣ್ಯದಲ್ಲಿ ನೂರಾರು ಸಸಿಗಳು ಸತತ 4 ತಿಂಗಳ ಸುಡುಬೇಸಿಗೆಯ ತಾಪದಲ್ಲೂ ಹಸಿರುಡುಗೆ ಉಟ್ಟು ನಗೆ ಚೆಲ್ಲುತ್ತಿವೆ.

ಇವರ ಹೆಸರು ರಮೇಶ್. ಮಿನರಲ್ ವಾಟರ್ ಮಾರಾಟ ಮಾಡುವುದು ಇವರ ವೃತ್ತಿ. ಶ್ರೀರಂಗಪಟ್ಟಣ ತಾಲ್ಲೂಕಿನ ಚಂದಗಾಲು ರಮೇಶ ಅವರ ಹುಟ್ಟೂರು. ಅದಮ್ಯ ಪರಿಸರ ಕಾಳಜಿ ಹೊಂದಿರುವ ಇವರು ಸುಡುಬಿಸಿಲ ತಾಪಕ್ಕೆ ಕರಿಘಟ್ಟ ಅರಣ್ಯದ ಸಸ್ಯ ಸಂಕುಲ ಒಣಗುತ್ತಿರುವುದನ್ನು ಕಂಡು ಅವುಗಳ ಜೀವ ಉಳಿಸುವ ಕೆಲಸಕ್ಕೆ ಮುಂದಾಗಿದ್ದಾರೆ. ಸಮುದ್ರ ಮಟ್ಟದಿಂದ 2,697 ಅಡಿ ಎತ್ತರದವರೆಗೂ ವಿಸ್ತರಿಸಿರುವ ಕರಿಘಟ್ಟದ ಅರಣ್ಯದಲ್ಲಿ ಬಿಸಿಲಿನ ಝಳಕ್ಕೆ ಎತ್ತರದ ಪ್ರದೇಶದ ಗಿಡಗಳು ಬಾಡಿ ಹೋಗುತ್ತಿದ್ದವು.ಇಂತಹ ಸ್ಥಿತಿಯನ್ನು ಕಂಡು ಮರುಗಿದ ರಮೇಶ್ ಅವುಗಳ ಕೊರಳಿಗೆ ನೀರಿನ ಬೋಗುಣಿಗಳನ್ನು ಕಟ್ಟಿ, ನೀರು ತೊಟ್ಟಿಕ್ಕಿಸಿ ಹಸಿರು ಉಳಿಯುವಂತೆ ಮಾಡಿದ್ದಾರೆ, ರಮೇಶ್ ಅವರ ಪ್ರಯತ್ನದ ಫಲವಾಗಿ ಕರಿಘಟ್ಟ ಅರಣ್ಯದಲ್ಲಿ ವಿವಿಧ ಜಾತಿಯ ನೂರಾರು ಗಿಡಗಳು ಜೀವ ಕಳೆಯಿಂದ ಶೋಭಿಸುತ್ತಿವೆ.





**ಕಳೆದ ಏಳೆಂಟು ವರ್ಷಗಳಿಂದ ಮಳೆಗಾಲದ ಆರಂಭದಲ್ಲಿ ರಮೇಶ್ ಕರಿಘಟ್ಟ, ಕೆ. ಶೆಟ್ಟಹಳ್ಳಿ ಮೀಸಲು ಅರಣ್ಯ, ಟಿ.ಎಂ. ಹೊಸೂರು ಅರಣ್ಯಕ್ಕೆ ತೆರಳಿ ಬೇವು, ನೇರಳೆ, ಹಿಪ್ಪೆ, ಹೊಂಗೆ ಬೀಜಗಳನ್ನು ಬಿತ್ತುತ್ತಾ ಬಂದಿದ್ದಾರೆ. ಅದರ ಫಲವಾಗಿ ಅಲ್ಲಲ್ಲಿ ಕೆಲವು ಬೀಜಗಳು ಮೊಳಕೆಯೊಡೆದು ಸಸಿಗಳಾಗಿ ಬೆಳೆಯುತ್ತಿವೆ.**

**ಗಿಡಗಳ ಕೊರಳಿಗೆ ಬೋಗುಣಿಯಲ್ಲಿ ನೀರು ಕಟ್ಟಿರುವುದು ಅರಣ್ಯದಲ್ಲಿರುವ ಹಕ್ಕಿಗಳ ದಾಹವನ್ನು ತಣಿಸುತ್ತದೆ. ಹೀಗಾಗಿ ಕರಿಘಟ್ಟ ಅರಣ್ಯದಲ್ಲಿ ಹತ್ತಾರು ಬಗೆಯ ಪಕ್ಷಿ ಸಂಕುಲ ನೆಲೆಸಿವೆ.**

**ಹನಿ ಹನಿ ನೀರು:** ರಮೇಶ್ ತಮ್ಮ ಬಳಿ ವ್ಯರ್ಥವಾಗಿ ಉಳಿದಿದ್ದ, 20 ಲೀಟರ್ ಸಂಗ್ರಹ ಸಾಮರ್ಥ್ಯದ ನೀರಿನ ಬಾಟಲಿಗಳನ್ನು ಅರ್ಧಕ್ಕೆ ಸೀಳಿ ಅವುಗಳನ್ನು ಗಿಡಗಳಿಗೆ ಕಟ್ಟಿದ್ದಾರೆ. ತಂತಿ ಸಹಾಯದಿಂದ ಅವುಗಳನ್ನು ಮರಗಳಿಗೆ ನೇತು ಹಾಕಿದ್ದಾರೆ. ಹೀಗೆ ಸಿದ್ಧಪಡಿಸಿದ, 10 ಲೀಟರ್ ನೀರು ತುಂಬಬಹುದಾದ ಬೋಗುಣಿಗಳನ್ನು ಗಿಡಗಳಿಗೆ ಕಟ್ಟಿ ಆ ಬೋಗಿಣಿಗೆ ಮೂರು ದಿನಗಳಿಗೆ ಒಮ್ಮೆ ನೀರು ತುಂಬುತ್ತಾರೆ. ಬೋಗುಣಿ ತಳದಿಂದ ನೀರು ತೊಟ್ಟಿಕ್ಕುವಂತೆ ರಂಧ್ರ ಮಾಡಿದ್ದು, ಹನಿ ಹನಿಯಾಗಿ ನೀರು ಗಿಡದ ಬುಡಕ್ಕೆ ಜಿನುಗುತ್ತದೆ. ಬಿಡುವಿನ ವೇಳೆಯಲ್ಲಿ ಅರಣ್ಯ ಪ್ರದೇಶಕ್ಕೆ ಹತ್ತಿರ ಇರುವ ಲೋಕಪಾವನಿ ನದಿಯಿಂದ ಕ್ಯಾನ್‌ಗಳಲ್ಲಿ ನೀರು ಹೊತ್ತೊಯ್ದು ಬೋಗುಣಿಗಳಿಗೆ ತುಂಬಿಸುತ್ತಾರೆ. ಬೋಗುಣಿಗಳಿಗೆ ತುಂಬಿಸಿದ ನೀರು 2–3 ದಿನಗಳ ಕಾಲ ಹನಿಯುತ್ತಿರುತ್ತದೆ. ಇದರಿಂದ ಗಿಡಗಳಿಗೆ ತೇವಾಂಶ ಸಿಕ್ಕಿ, ಬಾಡಿ ಹೋಗುತ್ತಿದ್ದ ಗಿಡಗಳು ಬದುಕುಳಿದಿವೆ.

ಸಂಪಾದಕೀಯ ಸಹಕಾರ ಸತ್ಯನಾರಾಯಣ ಶಾನುಬೋಗ್, ಶ್ರೀಹರ್ಷ ಪೆರ್ಲ, ಪ್ರವೀಣ್ ಪಟವರ್ಧನ್, ಶೈಲೇಶ್ ಕುಲಕರ್ಣಿ, ಪ್ರತಾಪ ಕೊಡಂಚ, ಶಶಾಂಕ್ ಹತ್ವಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

## ಕಲಿಕೆಗೊಂದು ಗುಬ್ಬಿ ಪ್ರಯೋಗ



ಶಾಲೆಯ ಗ್ರಂಥಾಲಯ ಮಕ್ಕಳ ಕುತೂಹಲ ಕೆರಳಿಸುವಂತೆ ಅವರ ಗ್ರಹಿಕೆಯ ಮಟ್ಟಕ್ಕೆ ತಕ್ಕಂತೆ ವಿನ್ಯಾಸಗೊಂಡರೆ ಅಲ್ಲಿಗೆ ಬರುವ ಮಕ್ಕಳ ಆಸಕ್ತಿ ಹೆಚ್ಚಿಸಬಹುದು ಎನ್ನುತ್ತವೆ, ತುಮಕೂರು ಜಿಲ್ಲೆಯ ಗುಬ್ಬಿಯ ಸರ್ಕಾರಿ ಶಾಲೆಗಳು.

ಶಿಕ್ಷಣ ಇಲಾಖೆಯು 'ಇಂಡಿಯಾ ಲಿಟರಸಿ ಪ್ರಾಜೆಕ್ಟ್' ಸ್ವಯಂಸೇವಾ ಸಂಸ್ಥೆಯ ಸಹಯೋಗದಲ್ಲಿ ಬಹು ಮಾಧ್ಯಮ ಕಲಿಕಾ ಅಂಗವೆಂಬ ಮಹತ್ವದ ಪ್ರಯೋಗ ಮಾಡಿದೆ. ಈ ಶಾಲೆಗಳಲ್ಲಿ ಸುಲಭವಾಗಿ ಮಾಡಬಹುದಾದ ಹಾಗೂ ಕಡಿಮೆ ಬೆಲೆಯ ವಿಜ್ಞಾನ ಪ್ರಾಯೋಗಿಕ ಕಿಟ್‌ಗಳು, ಕಂಪ್ಯೂಟರ್, ಪ್ರೊಜೆಕ್ಟರ್‌ಗಳಿವೆ. 'ಸ್ಮಾರ್ಟ್ ಕ್ಲಾಸ್' ಸೌಲಭ್ಯ ಮತ್ತು ಮಕ್ಕಳ ಗ್ರಹಿಕೆಯ ಮಟ್ಟಕ್ಕೆ ಅನುಗುಣವಾಗಿ ವರ್ಗೀಕರಿಸಿದ ಗ್ರಂಥಾಲಯ ಸೌಲಭ್ಯಗಳಿವೆ. ವಿದ್ಯಾರ್ಥಿಗಳು ಶಾಲೆ ವೇಳೆಗೆ ಮುಂಚೆ ಮತ್ತು ಶಾಲಾ ಅವಧಿಯ ನಂತರ ಗ್ರಂಥಾಲಯಕ್ಕೆ ಭೇಟಿ ನೀಡಿ ಕಲಿಯುತ್ತಿದ್ದಾರೆ. ಕಂಪ್ಯೂಟರ್‌ನಲ್ಲಿ ಪಠ್ಯಕ್ಕೆ ಸಂಬಂಧಿಸಿದ ವಿಡಿಯೊಗಳನ್ನು ನೋಡಿ ಇನ್ನಷ್ಟು ಜ್ಞಾನ ಬೆಳೆಸಿಕೊಳ್ಳುತ್ತಿದ್ದಾರೆ. ಇಲ್ಲಿ ಮಕ್ಕಳು ಪಠ್ಯ ವಿಷಯಗಳನ್ನು ಶಿಕ್ಷಕರ ಬೋಧನೆಯಷ್ಟೇ ಅಲ್ಲದೇ ಪ್ರಯೋಗಗಳ ಮೂಲಕ ಕಲಿಯುತಾರೆ. ಗಣಿತ ಹಾಗೂ ವಿಜ್ಞಾನದಿಂದಾಚೆಗೆ ಇತರ ವಿಷಯಗಳನ್ನು ಕಲಿಯುತ್ತಾ ತಿಳಿವಳಿಕೆಯ ಆಯಾಮಗಳನ್ನು ವಿಸ್ತರಿಸಿಕೊಳ್ಳುತ್ತಾರೆ. ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳಿಂದ ಮಾಡಿರುವ ಕಡಿಮೆ ಬೆಲೆಯ ವಿಜ್ಞಾನದ ಕಿಟ್‌ಗಳನ್ನು ನೀಡುವುದರಿಂದ ಮಕ್ಕಳು ತಾವೇ ಪ್ರಯೋಗ ಮಾಡಿ ತಿಳಿಯುತ್ತಾರೆ.

ಶಿಕ್ಷಣ ಇಲಾಖೆಯ ಪ್ರೋತ್ಸಾಹದಿಂದ 50 ಮಕ್ಕಳೊಂದಿಗೆ ಪ್ರಾರಂಭವಾದ ಈ ಪ್ರಯೋಗ ಐದು ವರ್ಷಗಳಲ್ಲಿ ಗುಬ್ಬಿ ತಾಲ್ಲೂಕನ್ನು ವ್ಯಾಪಿಸಿದೆ. 181 ಶಾಲೆಗಳ ಸುಮಾರು 16ಸಾವಿರ ಮಕ್ಕಳು ಬಹು ಆಯಾಮ ಕಲಿಕಾ ಅಂಗಳದ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಈ ಪರಿಕಲ್ಪನೆ ಜಾರಿಯಿಂದಾಗಿ ತಾಲ್ಲೂಕಿನಲ್ಲಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಚುರುಕು ಕಂಡಿದೆ. ಅಷ್ಟೇ ಅಲ್ಲ ಶಿಕ್ಷಕರ ಕೌಶಲವೃದ್ಧಿಗೂ ಸಹಕಾರಿಯಾಗಿದೆ. ಇದೀಗ ತುಮಕೂರು ಜಿಲ್ಲೆಯ ಪಾವಗಡ ಮತ್ತು ಶಿರಾ ತಾಲ್ಲೂಕುಗಳಿಗೂ ಈ 'ಬಹು ಆಯಾಮ ಕಲಿಕಾ ಅಂಗಳ' ಪರಿಕಲ್ಪನೆಯನ್ನು ವಿಸ್ತರಿಸಲು ಶಿಕ್ಷಣ ಇಲಾಖೆ ನಿರ್ಧರಿಸಿದೆ.




ಮಹಿಳಾ ಪೈಲಟ್‌ಗಳಾದ ಭಾವನಾ ಕಾಂತ್, ಅವನಿ ಚತುರ್ವೇದಿ ಮತ್ತು ಮೋಹನಾ ಸಿಂಗ್ ಅವರು ಭಾರತೀಯ ವಾಯುಪಡೆಯ ಯುದ್ಧ ವಿಮಾನಗಳಿಗೆ ಮಹಿಳಾ ಪೈಲಟ್‌ಗಳಾಗಿ ಸೇರ್ಪಡೆಗೊಳ್ಳುವ (ಜೂನ್ 18ರಂದು) ಮೂಲಕ ಇತಿಹಾಸ ನಿರ್ಮಿಸಿದ್ದಾರೆ. ಮೂವರೂ ಯುದ್ಧವಿಮಾನದ ಚಾಲನೆಯ ಪ್ರಾಥಮಿಕ ತರಬೇತಿಯನ್ನು ಕರ್ನಾಟಕದ ಬೀದರ್ ವಾಯುನೆಲೆಯಲ್ಲಿ ಪಡೆದಿದ್ದಾರೆ. ಕೆಡೆಟ್ ಭಾವನಾ ಕಾಂತ್ ಅವರು ಬೆಂಗಳೂರಿನ ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಬಿಇ ಇಂಜಿನಿಯರಿಂಗ್ (ಮೆಡಿಕಲ್ ಇಲೆಕ್ಟ್ರಾನಿಕ್ಸ್) ಪೂರೈಸಿದ್ದು, ಕೆಡೆಟ್ ಅವನಿ ಚತುರ್ವೇದಿ ಅವರು ಜೈಪುರದ ಬನಸ್ಥಲಿ ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್ ಸೈನ್ಸ್ ಪದವಿ ಪಡೆದಿದ್ದಾರೆ. ಕೆಡೆಟ್ ಮೋಹನಾ ಸಿಂಗ್ ಅವರು ಅಮೃತಸರದ ಜಿಐಎಮ್‌ಇಟಿಯಲ್ಲಿ ಕಲಿತಿದ್ದಾರೆ. ಅವರ ತಂದೆಯವರೂ ವಾಯುಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದು ಅವರ ತಾತ ವಾಯುಪಡೆ ವಿಮಾನ ಸಿಬ್ಬಂದಿಯಾಗಿದ್ದು, ಹಲವು ಕಾರ್ಯಾಚರಣೆಗಳಲ್ಲಿ ಭಾಗಿಯಾದವರು.

**ದೇವರ ಪೂಜೆಗೆ ಬಳಸಿದ ಹೂವು ನಿರ್ಮಾಲ್ಯವಾದಾಗ ಕಸಕ್ಕೆ ಹಾಕುವ ವಾಡಿಕೆ ನಮ್ಮಲ್ಲಿ ಇಲ್ಲ. ಕಾರಣ ಅದರ ಪಾವಿತ್ರ್ಯ. ಹಳ್ಳಿಗಳಲ್ಲಿ ಹಸುಗಳಿಗೆ ಆಹಾರವಾಗಿ ನಿರ್ಮಾಲ್ಯ ಬಳಕೆಯಾದರೆ ನಗರಗಳಲ್ಲಿ ಸಾಮಾನ್ಯವಾಗಿ ಗಿಡ ಮರಗಳಿಗೆ ಗೊಬ್ಬರವಾಗುತ್ತದೆ. ಮತ್ತೆ ಕೆಲ ಊರುಗಳಲ್ಲಿ ನದಿ, ಕೆರೆಗಳಿಗೆ ದೇವಸ್ಥಾನಗಳ ಪೂಜೆಯ ನಿರ್ಮಾಲ್ಯ ಹಾಕಿ ನದಿಯ ಸ್ವಚ್ಛತೆಯನ್ನು ಹಾಳು ಮಾಡಲಾಗುತ್ತಿದೆ. ಈ ವಿಷಯವನ್ನು ಗಮನಿಸಿ ಅಂಕಿತ್ ಅಗರ್ವಾಲ್ ಹಾಗೂ ಕರಣ್ ರಸ್ತೋಗಿ ಕಾನಪುರದಲ್ಲಿ ಈ ನಿರ್ಮಾಲ್ಯ ಹೂವುಗಳನ್ನು ಕಲೆಹಾಕಿ ಅದರಿಂದ ಊದುಬತ್ತಿ, ಸಾಬೂನು, ಕಾಂಪೋಸ್ಟ್ ತಯಾರಿಸುತ್ತಾರೆ. ನಿರ್ಮಾಲ್ಯದ ಹೂವನ್ನು ಸೆಗಣಿಯ ಜೊತೆ ಬೆರೆಸುತ್ತಾರೆ. ಇದರಿಂದ ಸುಗಂಧಯುಕ್ತ ಊದುಬತ್ತಿಯನ್ನು ತಯಾರಿಸುತ್ತಾರೆ. ಅಥವಾ ಈ ಮಿಶ್ರಣವನ್ನು ಕೊಳೆಯಲು ಬಿಟ್ಟು, ಎರೆಹುಳಗಳನ್ನು ಬಿಟ್ಟು– ವರ್ಮಿ ಕಾಂಪೋಸ್ಟ್ ಮಾಡುತ್ತಿದ್ದಾರೆ. ಕಾಂಪೋಸ್ಟ್‌ನ ಪೊಟ್ಟಣದ ಜೊತೆ ಬೀಜಗಳನ್ನೂ ಬೆರೆಸಿ ಭೂಮಿಗೆ ಎಸೆದರೂ ಸಾಕು ಎಂಬಂತೆ ಗಿಡ ಬೆಳೆಯುವಂತಹ ವಿನೂತನ ಯೋಜನೆಯನ್ನೂ ಅವರ 'ಹೆಲ್ಪ್ ಅಸ್ ಗ್ರೀನ್' ಎಂಬ ಸಾಮಾಜಿಕ ಸಂಸ್ಥೆಯ ಮೂಲಕ ನಡೆಸಿಕೊಂಡು, ಆಸಕ್ತರಿಗೆ ಮಾರ್ಗದರ್ಶನವನ್ನೂ ಮಾಡುತ್ತಿದ್ದಾರೆ.**

ಇಂದು ಪ್ಲಾಸ್ಟಿಕ್ ಬಳಕೆ ತಡೆಯಲು ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ ತ್ಯಾಜ್ಯವಾಗುವ ಪ್ಲಾಸ್ಟಿಕ್ ಅನ್ನು ರಸ್ತೆ ನಿರ್ಮಿಸಲು ಬಳಸಬಹುದು ಎಂದು ಹೇಳುತ್ತಿದ್ದುದನ್ನು ನಾವು ಕೇಳಿರುತ್ತೇವೆ. ಇದೀಗ ಮಹಾರಾಷ್ಟ್ರದ ಬಿಜೆಪಿ ಸರ್ಕಾರ ಇದನ್ನು ಜಾರಿಗೆ ತರಲು ನಿರ್ಧರಿಸಿದೆ. ಇದರಿಂದಾಗಿ ಪ್ಲಾಸ್ಟಿಕ್‌ಗೆ ಮೋಕ್ಷ ಸಿಗುವುದರ ಜೊತೆಗೆ ರಸ್ತೆಗೆ ನೀರು ಹೀರುವ ಶಕ್ತಿ ಹೆಚ್ಚುತ್ತದೆ  ಹಾಗೂ ರಸ್ತೆ ಕಾಮಗಾರಿಯ ಖರ್ಚು ಇಳಿಕೆಯಾಗುತ್ತದೆ ಎನ್ನಲಾಗುತ್ತಿದೆ. ಅಲ್ಲದೇ ಪ್ಲಾಸ್ಟಿಕನ್ನು ರಸ್ತೆ ಕಾಮಗಾರಿಯಲ್ಲಿ ಬಳಸುವುದರಿಂದ ರಸ್ತೆಯ ಬಾಳಿಕೆ ಮೂರು ವರ್ಷದಷ್ಟು ಹೆಚ್ಚುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

## ಸಾಲುದ್ದದ ಸುದ್ದಿಗಳು

**ನಲವತ್ತು ವರ್ಷದ ಪುರುಷೋತ್ತಮ ಲಾಲ್ ರಾಮಸ್ವರೂಪ್ ಗುಪ್ತಾ ಎಂಬ ಆಟೋ ಚಾಲಕರು ಮಹಾರಾಷ್ಟ್ರದ ಠಾಣೆಯ ಉಪವನ ಕೆರೆಯ ಸುತ್ತಮುತ್ತ ಚಿರಪರಿಚಿತರು. ತಮ್ಮ ಮನೆಯಿಂದ ಹೊರಡುವಾಗ 20 ಲೀಟರ್ ನೀರನ್ನು ಕೊಂಡೊಯ್ಯುವ ಈತ ಉಪವನದ ಗಿಡ ಮರಗಳಿಗೆ ದಿನವೂ ನೀರೆರೆಯುತ್ತಾರೆ. ಜೊತೆಗೆ ಗಿಡಗಳನ್ನೂ ನೆಡುತ್ತಿದ್ದಾರೆ. ಮುನಿಸಿಪಾಲಿಟಿಯ ಪರಿಸರದ ಕುರಿತಾದ ವರದಿಯೊಂದು ಓದಿದ ಬಳಿಕ ಈ ಕಾರ್ಯದಲ್ಲಿ ತೊಡಗಿಕೊಂಡಿರುವ ಪುರುಷೋತ್ತಮ ಲಾಲ್, ತಮ್ಮ ಸ್ನೇಹಿತರಿಗೂ ಈ ನಿಟ್ಟಿನಲ್ಲಿ ಯೋಚಿಸಿ ಗಿಡ ನೆಡುವಂತೆ ಪ್ರೇರೇಪಿಸುತ್ತಿದ್ದಾರೆ. ಹತ್ತಾರು ಜನರು ಇವರೊಂದಿಗೆ ಸೇರಿಕೊಂಡಿದ್ದು, 'ಸದ್ಭಾವನಾ ಹರಾಭರಾ ಭಾರತ' ಎಂಬ ಹೆಸರಿನ ಪ್ರಕಲ್ಪವನ್ನು ಹುಟ್ಟಿಹಾಕಿದ್ದಾರೆ. ಇದರೊಂದಿಗೆ ಕೈಜೋಡಿಸಬಯಸುವವರ ಮೊದಲ ಕೆಲಸ ಹತ್ತಿರದ ಗಿಡಗಳಿಗೆ ನೀರು ಎರೆಯುವುದು.**




ಮರಳದಂಡೆಯ ಮೇಲೆ ತಮ್ಮ ಅದ್ಭುತ ಕಲ್ಪನೆಗಳಿಗೆ ಮೂರ್ತರೂಪ ನೀಡುತ ಕಲೆಯ ಹೊಸ ಪ್ರಕಾರದಿಂದ ಭಾರತ ಸೇರಿದಂತೆ ಜಗತ್ತಿನಲ್ಲೆಲ್ಲಾ ಪ್ರಸಿದ್ಧರಾಗಿರುವ ಹೆಸರು ಸುದರ್ಶನ್ ಪಟ್ನಾಯಕ್ ಅವರದ್ದು. ದೇಶದ ಹೆಸರಾಂತ ಕ್ರೀಡಾಪಟುಗಳು, ರಾಜಕೀಯ ನಾಯಕರೇ ಅಲ್ಲದೆ ವಿಶಿಷ್ಟ ಸಂದರ್ಭಗಳನ್ನು ಸಹ ಮರಳಮೇಲೆ ಸಮರ್ಥವಾಗಿ ಚಿತ್ರಿಸಿರುವ ಕೀರ್ತಿ ಪಟ್ನಾಯಕರದ್ದು. ಇಂತಹ ಸುದರ್ಶನ್ ಒಂದುಕಾಲದಲ್ಲಿ ಹೊಟ್ಟೆಹೊರೆಯಲು ಬಾಲಕಾರ್ಮಿಕನಾಗಿ ದುಡಿಯುತ್ತಿದ್ದರು. ಬಡತನದ ಬೇಗೆಯಲ್ಲಿಯೇ ಬೆಳೆದ ಸುದರ್ಶನ್ ತಮ್ಮ ಬಾಲ್ಯದಿಂದಲೂ ಚಿತ್ರರಚನೆಯ ಹವ್ಯಾಸ ಬೆಳೆಸಿಕೊಂಡಿದ್ದರು. ಆದರೆ ಬಣ್ಣಗಳನ್ನು ಕೊಳ್ಳಲು ಹಣದ ಕೊರತೆ ಕಾಡುತ್ತಿತ್ತು. ಆಗ ಅವರಿಗೆ ಕಂಡಿದ್ದು ಮನೆಯ ಮುಂದಿನ ಸಮುದ್ರದ ದಂಡೆಯಲ್ಲಿರುವ ಮರಳುರಾಶಿ. ಅದನ್ನೇ ಬಳಸಿಕೊಂಡು ಶಿಲ್ಪಗಳನ್ನು ರಚಿಸಲು ಆರಂಭಿಸಿದರು. ಆಗ ಸುದರ್ಶನ್‌ಗೆ 9 ವರ್ಷ ವಯಸ್ಸು. ಸ್ವಪ್ರಯತ್ನದಿಂದ ಈ ಕಲೆಯನ್ನು ಒಲಿಸಿಕೊಂಡಿರುವ ಸುದರ್ಶನ್ ಇಂದು ಜಗತ್ತಿನಲ್ಲೆಲ್ಲ ಪ್ರಸಿದ್ಧರು. ಇತ್ತೀಚೆಗೆಷ್ಟೆ ರಷ್ಯಾದ ಮಾಸ್ಕೋದಲ್ಲಿ ನಡೆದ ಅಂತರರಾಷ್ಟ್ರೀಯ ಮರಳುಶಿಲ್ಪ ಸ್ಪರ್ಧೆಯಲ್ಲಿ 40 ದೇಶಗಳ ಸ್ಪರ್ಧಿಗಳ ನಡುವೆ ಸುದರ್ಶನ್ ಪ್ರಥಮ ಸ್ಥಾನ ಗಳಿಸಿ ಚಿನ್ನದ ಪದಕ ಗೆದ್ದು ಭಾರತದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಭಾರತದಲ್ಲಿ ಈವರೆಗೆ ಮರಳಮೇಲಿನ ಕುಸುರಿಯನ್ನು ಹೇಳಿಕೊಡುವ ಶಾಲೆ ಇರಲಿಲ್ಲ. ಇದೀಗ ಸುದರ್ಶನ್, ತನ್ನಲ್ಲಿರುವ ಈ ಕಲೆಯನ್ನು ಇತರರಿಗೂ ಪಸರಿಸಲು ಒರಿಸ್ಸಾದ ಪುರಿಯಲ್ಲಿ ಮರಳಶಿಲ್ಪವನ್ನು ಕಲಿಸುವ ಶಾಲೆಯನ್ನು ತೆರೆದಿದ್ದಾರೆ. ಅಲ್ಲಿ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಈ ಸಾಧನೆಗಾಗಿ ಅವರಿಗೆ ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ.



**ಮಗಳ ಹಸಿವೆ ತೀರಿಸಲಾಗದ ತಂದೆ ಇಂದು ಸಾವಿರಾರು ರೋಗಿಗಳ ಹಸಿವು ತೀರಿಸುತ್ತಿರುವ ಉದಾಹರಣೆ ಗುಜರಾತ್‌ನಲ್ಲೊಂದು ನಡೆದಿದೆ. ಗುಜರಾತಿನ ಅಹಮದಾಬಾದ್‌ನ ನಿವಾಸಿ ಹೇಮಂತ್ ಪಟೇಲರ ಮಗಳು ಆಸ್ಪತ್ರೆಯಲ್ಲಿದ್ದಾಗ ಆಸ್ಪತ್ರೆಯ ಆಹಾರ ಹೊಂದಿಕೆಯಾಗದೇ ಹೊರಗಿನ ತಿಂಡಿತರುವಂತೆ ಕೇಳಿದಳು. ಆದರೆ ಈಗಷ್ಟೆ ಕೆಲಸ ಕಳೆದುಕೊಂಡಿದ್ದ ಹೇಮಂತ್‌ಗೆ ಮಗಳ ಆಸೆ ಪೂರೈಸಲಾಗಲಿಲ್ಲ. ಸುಯೋಗದಿಂದ ಪಟೇಲರ ಮಗಳು ಗುಣಮುಖಳಾಗಿ ಮನೆಸೇರಿದಳು. ಆದರೆ ಪಟೇಲರಿಗೆ ಆಸ್ಪತ್ರೆಯಲ್ಲಿ ತಾನೆದುರಿಸಿದ ವಿಕಟ ಪರಿಸ್ಥಿತಿಯ ನೆನಪು ಮಾತ್ರ ಮಾಸಲಿಲ್ಲ. ತಮ್ಮದೇ ಊಟದ ಉದ್ದಿಮೆವನ್ನು ಪ್ರಾರಂಭಿಸಿದ ತಕ್ಕಮಟ್ಟಿಗೆ ಆದಾಯ ಗಳಿಸಲಾರಂಭಿಸಿದರು. ಅಹಮದಾಬಾದನಲ್ಲಿ ಕೋಮು ಹಿಂಸಾಚಾರ ಭುಗಿಲೆದ್ದ 2002ರ ಸಮಯ. ದಂಗೆಗೆ ಸಿಲುಕಿ ಗಾಯಗೊಂಡಿದ್ದ ತನ್ನ ಸಂಬಂಧಿಕರ ಆರೋಗ್ಯ ವಿಚಾರಿಸಲು ಆಸ್ಪತ್ರೆಗೆ ಬಂದ ಪಟೇಲರಿಗೆ ಸುತ್ತಲೂ ಕಂಡಿದ್ದು ಗಾಯಾಳುಗಳು ಮತ್ತು ಹಸಿವಿಯಿಂದ ನರಳುತ್ತಿದ್ದ ಬಡಜೀವಗಳು. ಹೆತ್ತ ಮಗಳ ಹಸಿವನ್ನೂ ಇಂಗಿಸಲಾಗದ ಹಳೆಯ ನೆನಪೆಲ್ಲ ಮತ್ತೆ ಕಾಡಿತು. ಇವರ ನೆರವಿಗೆ ಬರಲು ನಿರ್ಧರಿಸಿದರು. ನಿತ್ಯದ ಅನ್ನದಾಸೋಹ ಪ್ರಾರಂಭಿಸಿದರು. ಇದೀಗ ಸುಮಾರು 250 –300 ಜನರಿಗೆ ಸಾಕಾಗುವಷ್ಟು ಊಟವನ್ನು ಮನೆಯಲ್ಲಿಯೇ ತಯಾರಿಸಿ ಬಡರೋಗಿಗಳಿಗೆ ಹಂಚುತ್ತಿದ್ದಾರೆ. ಜೊತೆಗೆ ಇದೀಗ ಕೆಲವರ್ಷದಿಂದ ಅಹಮದಾಬಾದಿನ ಸೇವಾಬಸ್ತಿಗಳ 100–150 ಕುಟುಂಬಗಳಿಗೆ ನಿತ್ಯಊಟ ಪೂರೈಸುತ್ತಿದ್ದಾರೆ.**

**ಸಂಸ್ಕೃತ ಭಾಷೆಯನ್ನು ಸಂವಹನದ ಭಾಷೆಯನ್ನಾಗಿ ಪರಿಗಣಿಸಬೇಕೇ ಹೊರತು ಶಾಸ್ತ್ರೀಯ ಭಾಷೆಯನ್ನಾಗಿ ಅಲ್ಲ. ಮಕ್ಕಳು ಸಂಸ್ಕೃತವನ್ನು ಸುಲಲಿತವಾಗಿ ಮಾತನಾಡುವಂತಾಗಬೇಕು, ಅದಕ್ಕೆ ಸಂಸ್ಕೃತವನ್ನು ಹೇಳಿಕೊಡುವ ವಿಧಾನದಲ್ಲಿ ಬದಲಾವಣೆ ಮಾಡಿಕೊಳ್ಳಬೇಕು ಎಂದು ಕರಡು ರಾಷ್ಟ್ರೀಯ ಶಿಕ್ಷಣ ನೀತಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ.**



ಮುಸ್ಲಿಂ ಉಗ್ರರ ಉಪಟಳ ತಾಳದೆ ತಮ್ಮದೇ ನೆಲದಿಂದ ಓಡಿಹೋಗಿದ್ದ ಕಾಶ್ಮೀರಿ ಪಂಡಿತರು, ಇದೀಗ 75 ಸುದೀರ್ಘ ವರ್ಷಗಳ ನಂತರ ತಾಯ್ನಾಡಿನಲ್ಲಿ ಕುಂಭಮೇಳದಲ್ಲಿ ಭಾಗವಹಿಸಿದ್ದಾರೆ. ಜಮ್ಮು–ಕಾಶ್ಮೀರದ ಗಂದೇರ್ಬಾಲ್ ಜಿಲ್ಲೆಯ ಜೀಲಮ್ ಮತ್ತು ಸಿಂಧ್ ನದಿ ಸಂಗಮದಲ್ಲಿ ನಡೆದ ಈ ಮಹಾಕುಂಭದಲ್ಲಿ ಸುಮಾರು 20,000ಕ್ಕೂ ಹೆಚ್ಚು ಹಿಂದುಗಳು(ಬಹುತೇಕರು ಕಾಶ್ಮೀರಿ ಪಂಡಿತರು) ಭಾಗವಹಿಸಿದ್ದರು. 1990ರಲ್ಲಿ ಪಂಡಿತ್ ಸಮುದಾಯ ಕಾಶ್ಮೀರದಿಂದ ವಲಸೆ ಹೋಗುವ  ಮುನ್ನ ಕಾಶ್ಮೀರದವರಿಗಾಗಿ ಪಂಚಾಂಗ ಪ್ರಕಟಿಸುತ್ತಿದ್ದ ಕುಟುಂಬದ ಜ್ಯೋತಿಷಿ ಓಂಕಾರನಾಥ್ ಶಾಸ್ತ್ರಿ ಈ ವರ್ಷದ ಮಹಾಕುಂಭವನ್ನು ಘೋಷಿಸಿದ್ದಾರೆ.

**ಒಡಿಸ್ಸಾದ ಮಯೂರುಭುಂಜ್ ಜಿಲ್ಲೆಯ ಬಿಪಾಲಕ್ ಎಂಬ ಪ್ರದೇಶದ ಜನರು ನಿಸರ್ಗವನ್ನು ಕಾಪಾಡುವ ನಿಟ್ಟಿನಲ್ಲಿ ಜಾಗೃತರಾಗಿದ್ದಾರೆ. ಬೇಸಿಗೆಗಾಲದ ಉರಿಬಿಸಿಲಿನ ಝಳ ಹೆಚ್ಚಿದಂತೆ ಅವರು ತಮ್ಮ ಸಮೀಪದ ಅರಣ್ಯದ ಬಗ್ಗೆ ಅಧಿಕ ಕಾಳಜಿ ವಹಿಸಲಾರಂಭಿಸುತ್ತಾರೆ. ಇಲ್ಲಿ ಒಟ್ಟು 54 ಗಿರಿಜನ ಪಂಗಡದವರು ವಾಸ್ತವ್ಯ ಹೂಡಿದ್ದು, ಅವರಿಗೆ 1200 ಹೆಕ್ಟೆರ್ ಅರಣ್ಯ ಪ್ರದೇಶದ ಹಕ್ಕು ಪತ್ರವನ್ನು ಸರ್ಕಾರ ನೀಡಿದೆ. ಈ ಅರಣ್ಯಗಳ ರಕ್ಷಣೆಗಾಗಿ ಆ ಪ್ರದೇಶದ ಜನರೆಲ್ಲ ಸೇರಿ 'ಬಿಪಾಲಕ ಅರಣ್ಯ ಸುರಕ್ಷಾ ಪರಿಚಾಲನಾ ಸಮಿತಿ'ಯನ್ನು ರಚಿಸಿಕೊಂಡಿದ್ದಾರೆ. ಅರಣ್ಯಗಳಲ್ಲಿ ಏನಾದರೂ ಅನಾಹುತವಾಗುವ ಮುನ್ಸೂಚನೆ ದೊರೆತಲ್ಲಿ ತಕ್ಷಣ ಅವರೇ ಅದನ್ನು ನಿಯಂತ್ರಿಸಲು ಕಾರ್ಯಪ್ರವೃತ್ತರಾಗುತ್ತಾರೆ. ಸರಕಾರದ ಅರಣ್ಯ ಇಲಾಖೆ ಇತ್ಯಾದಿಗಳನ್ನು ಅವರು ಕಾಯುವುದೇ ಇಲ್ಲ. ಗ್ರಾಮದ ಇಬ್ಬರು ಸದಸ್ಯರು ಸರದಿಯ ಮೇಲೆ ಅರಣ್ಯ ಸಂಚಾರ ಮಾಡುತ್ತಾ ತುರ್ತು  ಪರಿಸ್ಥಿತಿ ಉಂಟಾದಾಗ ತಮ್ಮ ಗ್ರಾಮಸ್ಥರನ್ನು ಎಚ್ಚರಿಸುತ್ತಿರುತ್ತಾರೆ. ಇದರಿಂದ ಒಂದೊಂದು ಸ್ಥಳದಲ್ಲಿ ಉಂಟಾಗುವ ಬೆಂಕಿಯನ್ನು ಸಣ್ಣ ಪ್ರಮಾಣದಲ್ಲಿರುವಾಗಲೇ ನಿಯಂತ್ರಿಸಲಾಗುತ್ತದೆ. ಇದೀಗ ಈ ಕ್ರಮವನ್ನು ನೆರೆಯ ಕೋಹ್ಲಾ ಗ್ರಾಮದವರು ಅನುಸರಿಸುತ್ತಿದ್ದಾರೆ. ಸರ್ಕಾರ ಇದೀಗ ಸಿಮಿಲಿಪಾಲ್ ರಾಷ್ಟ್ರೀಯ ಉದ್ಯಾನ ಪ್ರದೇಶದಲ್ಲಿ 43 ಗ್ರಾಮಗಳಿಗೆ ಸಮುದಾಯ ಅರಣ್ಯ ಹಕ್ಕುಪತ್ರಗಳನ್ನು ನೀಡಿದೆ. ಹೀಗಾಗಿ ಅಲ್ಲಿಯ ಅರಣ್ಯಗಳಿಗೀಗ ಭಾರೀ ಅಗ್ನಿ ಅನಾಹುತದ ಭಯವಿಲ್ಲ. ಈ ರೀತಿಯ ಅರಣ್ಯ ಪ್ರದೇಶವನ್ನು ಕಾಪಾಡಿದ್ದರಿಂದ ಅಲ್ಲಿ ಹುಲಿ ಸಂತತಿಯೂ ವೃದ್ಧಿಯಾಗುತ್ತಿದೆ.**

ಸೆರಬ್ರಲ್ ಪಾಲ್ಸಿ ಸಮಸ್ಯೆಯಿಂದ ಬಳಲುತ್ತಿರುವ ಅಜಿತ್ ಬಾಬು ಅವರ ಸಾಧನೆಯ ಕಥೆ ಇದು. ಬೆಂಗಳೂರಿನ ಅಜಿತ್ ಬಾಬು ಮಾಧ್ಯಮ ಹಾಗೂ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮೂರು ಸ್ಟಾರ್ಟ್‌ಅಪ್‌ಗಳನ್ನು ನಡೆಸುತ್ತಿದ್ದಾರೆ. ಪತ್ರಿಕೋದ್ಯಮದಲ್ಲಿ ಅತೀವ ಆಸಕ್ತಿ ಹೊಂದಿದ್ದ ಅಜಿತ್, ಇಂಗ್ಲಿಷ್ ಸಾಹಿತ್ಯ, ಸೈಕಾಲಜಿ ಮತ್ತು ಪತ್ರಿಕೋದ್ಯಮ ವಿಷಯಗಳನ್ನು ಆರಿಸಿ ಪದವಿಗೆ ಸೇರಿದರು. ಆದರೆ ಲ್ಯಾಬ್‌ನಲ್ಲಿ ಕೆಲಸ ಮಾಡಲಾಗದೇ ಪದವಿಯನ್ನು ಅರ್ಧಕ್ಕೆ ಮೊಟಕುಗೊಳಿಸಿದರು. ಬರೆಯುವುದು ಮತ್ತು ಮಾತನಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದ ಅಜಿತ್ ಮಾಧ್ಯಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ 'ಸ್ಟ್ರೀಟ್‌ಲೈಟ್ ಮೀಡಿಯಾ' ಎಂಬ ಸ್ಟಾರ್ಟ್‌ಅಪ್ ಆರಂಭಿಸಿದರು. ಇದರ ಮೂಲಕ ಸಿನಿಮಾ, ಜಾಹೀರಾತು, ಟಿ.ವಿ ಕಾರ್ಯಕ್ರಮ ಸೇರಿದಂತೆ ಮ್ಯೂಸಿಕ್ ವಿಡಿಯೊ ಸೇವೆಯನ್ನು ನೀಡುತ್ತಿದ್ದಾರೆ. ನೇಪಾಳದ ಭೂಕಂಪ ಸಂತ್ರಸ್ತರಿಗಾಗಿ ಸೌರದೀಪಗಳನ್ನು ಖರೀದಿಸಿ ಅಲ್ಲಿಗೆ ಕಳುಹಿಸಿಕೊಟ್ಟಿದ್ದರು. ಈ ಸೌರದೀಪಗಳ ಪ್ರೇರಣೆಯಿಂದ 'ಸೌರಪವರ್‌ಬ್ಯಾಂಕ್' ತಯಾರಿಕೆಗಾಗಿ 'ಲೈಫ್‌ಹ್ಯಾಕ್' ಎಂಬ ಕಂಪೆನಿ ಆರಂಭಿಸಿದ್ದಾರೆ. ಇಲ್ಲಿ ಪವನ ಮತ್ತು ಸೌರಶಕ್ತಿ ಮೂಲಕ ಚಾರ್ಜ್ ಮಾಡಬಹುದಾದ ಪವರ್ ಬ್ಯಾಂಕ್‌ಗಳನ್ನು ತಯಾರಿಸಲಾಗುತ್ತಿದೆ. ಇದಕ್ಕೆ ಉತ್ತಮ ಬೇಡಿಕೆ ವ್ಯಕ್ತವಾಗುತ್ತಿದೆ. ಕೇವಲ 5 ಅಡಿ ಎತ್ತರವಿರುವ ಮತ್ತು ಸರಿಯಾಗಿ ನಡೆದಾಡಲು ಬಾರದ ಅಜಿತ್ ಸಾಧನೆ ಯುವ ಪೀಳಿಗೆಗೆ ಮಾದರಿ.

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
1-7-2016



TAPAS
reach the unreached

# ತಪಸ್‌ಗೆ ಒಲಿದ ಸರಸ್ವತಿ

- 11 ಮಂದಿ ಐಐಟಿಗೆ ಅರ್ಹತೆ
- 30 ಡಿಸ್ಟಿಂಕ್ಷನ್
- 10 ಮಂದಿ 500ರ ಒಳಗಿನ ಸಿಇಟಿ ರ್ಯಾಂಕ್

ಆರೆಸ್ಸೆಸ್ ಪ್ರೇರಿತ ಸಂಘಟನೆಯಾದ ರಾಷ್ಟ್ರೋತ್ಥಾನ ಪರಿಷತ್‌ನ ತಪಸ್ ಯೋಜನೆಯಲ್ಲಿ ಶಿಕ್ಷಣ ಪಡೆದ 11 ಮಂದಿ ವಿದ್ಯಾರ್ಥಿಗಳು ಪ್ರತಿಷ್ಠಿತ ಐಐಟಿ ಶಿಕ್ಷಣಕ್ಕೆ ಅರ್ಹತೆ ಪಡೆದಿದ್ದಾರೆ.

ರಾಷ್ಟ್ರೋತ್ಥಾನದ 'ತಪಸ್' ಯೋಜನೆಯಲ್ಲಿ ಕಲಿತ ಸಾಮಾನ್ಯ ಕೂಲಿ ಕಾರ್ಮಿಕ, ಚಮ್ಮಾರ ಸೇರಿದಂತೆ ಸಾಮಾನ್ಯ ಕೌಟುಂಬಿಕ ಹಿನ್ನೆಲೆಯ 34 ಮಂದಿ 2015–16ನೇ ಶೈಕ್ಷಣಿಕ ವರ್ಷದ ದ್ವಿತೀಯ ಪಿಯುಸಿ ಪರೀಕ್ಷೆ ಬರೆದಿದ್ದರು. ಇದೀಗ ಫಲಿತಾಂಶ ಪ್ರಕಟಗೊಂಡಿದ್ದು, ಎಲ್ಲರೂ ಉತ್ತೀರ್ಣರಾಗಿದ್ದಾರೆ. ಇವರಲ್ಲಿ 30 ಮಂದಿ ಡಿಸ್ಟಿಂಕ್ಷನ್ ಅಂಕ ಗಳಿಸಿ ತೇರ್ಗಡೆಯಾಗಿದ್ದಾರೆ. ಮಾತ್ರವಲ್ಲದೇ ಕರ್ನಾಟಕ ಸರ್ಕಾರ ನಡೆಸುವ ಸಿಇಟಿ (CET- Common Entrance Test) ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 10 ಮಂದಿ ವಿದ್ಯಾರ್ಥಿಗಳು 500ರೊಳಗಿನ ರ್ಯಾಂಕ್ ಗಳಿಸಿದ್ದಾರೆ. 11 ಮಂದಿ ವಿದ್ಯಾರ್ಥಿಗಳು ಪ್ರತಿಷ್ಠಿತ ಐಐಟಿ ಶಿಕ್ಷಣಕ್ಕೆ ಅರ್ಹತೆ ಪಡೆದಿದ್ದಾರೆ.

| ಸಿಇಟಿ ರ್ಯಾಂಕಿಂಗ್ |
|---|
| 500 < 10 ವಿದ್ಯಾರ್ಥಿಗಳು |
| 1000 < 4 ವಿದ್ಯಾರ್ಥಿಗಳು |
| 2000 < 5 ವಿದ್ಯಾರ್ಥಿಗಳು |
| 5000 < 4 ವಿದ್ಯಾರ್ಥಿಗಳು |
| 10,000 < 5 ವಿದ್ಯಾರ್ಥಿಗಳು |

ಬೆಳಗಾವಿಯ ಸಂಕೇಶ್ವರದ ಕೂಲಿ ಕಾರ್ಮಿಕನ ಮಗನಾದ ಪವನ್ ವಿ ಬೋರುಗುಂಡೆ, ಉತ್ತರ ಕನ್ನಡದ ರೈತನ ಮಗನಾದ ಪ್ರಸನ್ನ ವಿ. ಹೆಬ್ಬಾರ್, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಟೈಲರ್ ಮಗನಾದ ರಾಹುಲ್ ವಿ. ಪೂಜಾರ್, ಅಡುಗೆ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದ ಉತ್ತರ ಕನ್ನಡದ ನಾರಾಯಣ ಎಂ. ಹೆಗ್ಡೆ, ಕೊಪ್ಪಳದ ರೈತನ ಮಗನಾದ ಪ್ರವೀಣಗೂಡ ಎನ್ ಪಾಟೀಲ್, ಬೆಂಗಳೂರಿನ ಖಾಸಗಿ ಕಂಪೆನಿಯಲ್ಲಿ ಸಾಮಾನ್ಯ ಕೆಲಸಗಾರನ ಮಗನಾದ ಹರ್ಷಿತ್ ಆರ್., ಬೆಂಗಳೂರಿನಲ್ಲಿ ಸೆಕ್ಯುರಿಟಿ ಕೆಲಸ ಮಾಡಿ ಜೀವನ ನಿರ್ವಹಿಸುತ್ತಿರುವ ಮುಸಲ್ಮಾನ್ ಸಮಾಜದ ಬಾಬಾ ಡಿ., ಧಾರವಾಡದ ಖಾಸಗಿ ಕಂಪೆನಿ ಉದ್ಯೋಗಿಯ ಮಗನಾದ ಅಭಿಜಿತ್ ಕುಲಕರ್ಣಿ, ರಾಯಚೂರಿನ ರೈತನ ಮಗನಾದ ಅಭಿಷೇಕ್, ಬೆಳಗಾವಿಯ ರೈತನ ಮಗನಾದ ಓಂಕಾರ ಎ. ದಿವಾನ್, ಶಿವಮೊಗ್ಗದ ಟೈಲರ್ ಮಗನಾದ ಯಶವಂತ ಸಿ. ದೇಶದ ಪ್ರತಿಷ್ಠಿತ ಐಐಟಿಗೆ ಆಯ್ಕೆಯಾದ ವಿದ್ಯಾರ್ಥಿಗಳು. ಈ ವಿದ್ಯಾರ್ಥಿಗಳು ರಾಜ್ಯದ ಸಿಇಟಿ ಪರೀಕ್ಷೆಯಲ್ಲಿಯೂ ಉತ್ತಮ ರ್ಯಾಂಕ್ ಗಳಿಸಿದ್ದಾರೆ.

ಆರ್ಥಿಕವಾಗಿ ಹಿಂದುಳಿದ ರಾಜ್ಯದ ವಿದ್ಯಾರ್ಥಿಗಳಿಗೆ ವಸತಿ ಸಹಿತ ಉಚಿತ ಪಿಯುಸಿ ಹಾಗೂ ಐಐಟಿ–ಜೆಇಇ ಶಿಕ್ಷಣ ನೀಡುವ ಉದ್ದೇಶದಿಂದ ರಾಷ್ಟ್ರೋತ್ಥಾನ ಪರಿಷತ್ 2012ರಲ್ಲಿ 'ತಪಸ್' ಯೋಜನೆಯನ್ನು ಪ್ರಾರಂಭಿಸಿತು. ಬೇಸ್ ಸಂಸ್ಥೆ ಈ ಯೋಜನೆಗೆ ಸಹಯೋಗ ನೀಡಿದೆ. ಈವರೆಗೆ ತಪಸ್‌ನಿಂದ ಪ್ರಯೋಜನ ಪಡೆದ ವಿದ್ಯಾರ್ಥಿಗಳು ರಾಜ್ಯ ಹಾಗೂ ದೇಶದ ಪ್ರತಿಷ್ಠಿತ ಕಾಲೇಜುಗಳಲ್ಲಿ ಐಐಟಿ, ಎನ್‌ಐಟಿ ಹಾಗೂ ಇಂಜಿನಿಯರಿಂಗ್ ಶಿಕ್ಷಣ ಪಡೆಯುತ್ತಿದ್ದಾರೆ.

# ದೇಗುಲದಿಂದ ಊರಿಗೆ ನೆರಳು

ದೇವಸ್ಥಾನದ ಸೇವೆಗಳ ಪಟ್ಟಿಯಲ್ಲಿ ಏನಿರುತ್ತದೆ? ಅರ್ಚನೆ, ಪೂಜೆ, ಪ್ರಸಾದ ತೀರ್ಥಕ್ಕೆ ಇಷ್ಟಿಷ್ಟು ಎನ್ನುವುದನ್ನು ಕೇಳಿದ್ದೇವೆ. ಆದರೆ ದೇವಸ್ಥಾನದ ಸೇವೆಗಳ ಪಟ್ಟಿಯಲ್ಲಿ ಪರಿಸರ ಕಾಳಜಿಯ 'ಹಸಿರು ಸೇವೆ' ಇರುವುದನ್ನು ನೋಡಿದ್ದೀರಾ? ಇಂತಹ ದೃಶ್ಯ ಕಾಣಸಿಗುವುದು ಕಾಸರಗೂಡಿನ ಪೆರ್ಲ ಬಳಿಯ ಬಜಕೂಡ್ಲು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ. ನಮ್ಮಲ್ಲಿ ದೇವಸ್ಥಾನಗಳು ಕೇವಲ ಪೂಜೆ, ಪ್ರವಚನಗಳಿಗೆ ಸೀಮಿತವಲ್ಲ, ಅದು ಊರಿಗೆ ಪ್ರೇರಣೆ–ನೆರಳು ನೀಡುವ ಚಟುವಟಿಕೆಗಳ ಮೂಲಸ್ಥಾನ ಎಂಬುದನ್ನು ದೃಢಪಡಿಸುವಂತಿದೆ ಈ ದೇವಸ್ಥಾನ.

ದೇವಸ್ಥಾನದ ಬಳಿಯ ಸುಮಾರು ಎರಡು ಎಕರೆಗಳಷ್ಟು ಜಾಗದಲ್ಲಿ ಸಮೃದ್ಧವಾಗಿ ರೂಪುಗೊಳ್ಳುತ್ತಿರುವ ಒಂದು 'ಈಶ ವನ'ವಿದೆ. ಔಷಧೀಯ ಸಸ್ಯಗಳು, ದೇಗುಲಗಳಲ್ಲಿ ನಿತ್ಯ ಪೂಜೆಗೆ ಮತ್ತು ಅಡುಗೆಗೆ ಬೇಕಾಗಿರುವ ಬಿಲ್ವ, ಹೂಗಳು, ವಿಶಾಲ ವೃಕ್ಷಗಳು ಹಾಗೂ ನೆರಳು ನೀಡುವ ಮರಗಳು ಅಲ್ಲಿ ಬೆಳೆಯುತ್ತಿವೆ. ದೇವಸ್ಥಾನದಲ್ಲಿ ಸಲ್ಲಿಸಬಹುದಾದ ಸೇವೆಗಳ ಪಟ್ಟಿಯಲ್ಲಿ "ಹಸಿರು ಸೇವೆ" ಎಂಬ ಒಂದು ವಿಶೇಷ ಸೇವಾವಕಾಶವನ್ನು ಭಕ್ತರಿಗೆ ಒದಗಿಸಿದೆ. ಆ ಸೇವೆಗೆ 500 ರೂ. ನೀಗದಿಪಡಿಸಿದೆ. ಈ ಹಣವನ್ನು ನೀಡಿದರೆ ದೇವಸ್ಥಾನದ 'ಈಶವನ'ದಲ್ಲಿ ಸೇವಾಕರ್ತರ ಹೆಸರಿನಲ್ಲಿ ಒಂದು ಗಿಡವನ್ನು ನೆಟ್ಟು ಅದರ ಆರೈಕೆ ಮಾಡಲಾಗುತ್ತದೆ. ಭಕ್ತಿಯಭಾವದ ಜೊತೆಗೆ ಹಸಿರು ಉಳಿಸಲು ನೆರವಾದ ಸಾರ್ಥಕ ಭಾವ ಒಂದೇ ಸೇವೆಯಿಂದ ಲಭ್ಯ.

ಈ ಯೋಜನೆ ಆರಂಭವಾಗಿರುವುದೂ ಒಂದು ವಿಭಿನ್ನ ಕಾರಣದಿಂದ. ದೇಗುಲಕ್ಕೆ ತಾಗಿಕೊಂಡಿದ್ದ ವಿಶಾಲ ನೇರಳೆಯ ಮರವೊಂದನ್ನು ಅಭಿವೃದ್ಧಿಯ ಕಾರಣಕ್ಕೆ ತೆರವುಗೊಳಿಸುವ ಅನಿವಾರ್ಯತೆ ಬಂದಿತ್ತು. ಗ್ರಾಮದ ಉಸಿರಿನ ಭಾಗವಾಗಿದ್ದ ಮರವನ್ನು ಕಡಿಯಲು ಊರ ಜನರಿಗೆ ತಳಮಳ. ಅದಕ್ಕೆ ಪ್ರಾಯಶ್ಚಿತ್ತವಾಗಿ ನೇರಳೆಯ ಜೊತೆಗೆ ಇನ್ನೂ ಹಲವಾರು ಮರಗಳನ್ನು ಬೆಳೆಸಿ ವನ ನಿರ್ಮಿಸುವ ಯೋಜನೆ ಜಾರಿಗೆ ತರಲು ನಿರ್ಧರಿಸಿ, ಮರವನ್ನು ಕಡಿಯಲಾಯಿತು. ಇದೀಗ ದೇವಸ್ಥಾನದ ಆಶ್ರಯದಲ್ಲಿ ಪರಿಸರ ಜಾಗೃತಿ ಮೂಡಿಸುವ ಈಶವನ'ವೊಂದು ನಿರ್ಮಾಣಗೊಂಡಿದೆ. ಊರ ಪರಿಸರ ಪ್ರೇಮಿಗಳು, ಪೆರ್ಲ ಶಾಲೆಯ ವಿದ್ಯಾರ್ಥಿಗಳು ಈ ಕಾರ್ಯಕ್ಕೆ ಕೈಜೋಡಿಸಿದ್ದಾರೆ.

ಅಪರೂಪದ ಮತ್ತು ವಿನಾಶದಂಚಿಗೆ ತಲುಪಿರುವ ಮರಗಳು, ಹೂ ಬಿಡುವ ಸಸಿಗಳು, ಔಷಧೀಯ ಗುಣವುಳ್ಳ ವೃಕ್ಷಗಳು, ವಿಶಿಷ್ಟ ಬಳ್ಳಿಗಳು ಮತ್ತು ಹಣ್ಣುಹಂಪಲುಗಳನ್ನು ನೀಡುವ ಮರಗಳು, ಅತ್ತಿ , ಬಿಲ್ವಪತ್ರೆ, ಶಮೀ ಸಹಿತ ಧಾರ್ಮಿಕ ಕಾರ್ಯಗಳಿಗೆ ಬಳಕೆಯಾಗುವ 154 ವಿಧದ ಗಿಡಗಳನ್ನು ಈಶ ವನದಲ್ಲಿದೆ. ದೇವ ಕಾರ್ಯದ ಜೊತೆಗೆ ಪರಿಸರ ಸಂರಕ್ಷಣೆಯನ್ನೂ ಮಾಡುವ ಈ ಯೋಜನೆ ಅನುಕರಣೀಯವಾದುದು.



# ಆರೆಸ್ಸೆಸ್ ಚಟುವಟಿಕೆಗಳಿಗೆ ಜಾತಿ, ಮತದ ಹಂಗಿಲ್ಲ

ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರೆಸ್ಸೆಸ್) ನಡೆಸುವ ಚಟುವಟಿಕೆಗಳಲ್ಲಿ ಜಾತಿ, ಮತ, ಪಂಥಗಳ ಬೇಧವಿಲ್ಲ. 'ಎಲ್ಲರೂ ಒಂದೇ' ಎಂಬ ಭಾವನೆಯಲ್ಲಿಯೂ ಆರೆಸ್ಸೆಸ್ ಕೆಲಸ ಮಾಡುತ್ತದೆ. ಭಾರತ, ಭಾರತೀಯತೆ ಬಗೆಗೆ ಶ್ರದ್ಧೆ, ಗೌರವವಿರುವವರೆಲ್ಲರೂ ನಮ್ಮವರೇ ಎಂಬುದು ಆರೆಸ್ಸೆಸ್ ನಂಬಿಕೆ. ಆದರೆ ಆರೆಸ್ಸೆಸ್‌ಗೂ ಮುಸಲ್ಮಾನರಿಗೂ ಹೊಂದಾಣಿಕೆಯಾಗುವುದಿಲ್ಲ ಎಂಬ ಭಾವನೆ ಪ್ರಚಲಿತದಲ್ಲಿದೆ. ಇದು ಅಸತ್ಯ ಎಂಬುದು ಮತ್ತೆ ಮತ್ತೆ ರುಜುವಾತಾಗುತ್ತಿದೆ.

ಉತ್ತರ ಪ್ರದೇಶದಲ್ಲಿ ಆರೆಸ್ಸೆಸ್ ನಡೆಸುತ್ತಿರುವ 1,200 ಶಾಲೆಗಳಲ್ಲಿ 7,000ಕ್ಕೂ ಅಧಿಕ ಮುಸ್ಲಿಂ ವಿದ್ಯಾರ್ಥಿಗಳು ವಿದ್ಯಾಭ್ಯಾಸ ನಡೆಸುತ್ತಿದ್ದು, ಪ್ರತಿದಿನ ಶ್ಲೋಕ, ಭೋಜನ ಮಂತ್ರಗಳನ್ನು ಪಠಿಸುತ್ತಿದ್ದಾರೆ. ಕಲಿಕೆ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿಯೂ ಸಾಕಷ್ಟು ಮುಂದಿದ್ದಾರೆ. ಕಳೆದೆರಡು ವರ್ಷಗಳಲ್ಲಿ ಮುಸ್ಲಿಂ ವಿದ್ಯಾರ್ಥಿಗಳ ಸಂಖ್ಯೆ ಶೇ.30 ಏರಿಕೆಯಾಗಿದೆ. ಹೆಚ್ಚಿನ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶಗಳವರು.

ಆರೆಸ್ಸೆಸ್‌ನ ವಿದ್ಯಾಭಾರತಿ ಸಂಘಟನೆ ಅಡಿಯಲ್ಲಿ ನಡೆಯುವ ಸರಸ್ವತಿ ಶಿಶುಮಂದಿರ, ಸರಸ್ವತಿ ವಿದ್ಯಾಮಂದಿರಗಳಲ್ಲಿ ಕಲಿಯುತ್ತಿರುವ ಮುಸ್ಲಿಂ ವಿದ್ಯಾರ್ಥಿಗಳು ಕ್ರೀಡಾಕ್ಷೇತ್ರದಲ್ಲಿ ವಿಶೇಷ ಆಸಕ್ತಿ ಹೊಂದಿದ್ದು, ಶಾಲೆಗೂ ಕೀರ್ತಿ ತಂದಿದ್ದಾರೆ. ಇಲ್ಲಿ ಕಲಿತ ಮೊಹಮ್ಮದ್ ಅಕಿಬ್, ಅಬ್ ಆಲಂ, ಇಜಾಜ್ ಅಹಮ್ಮದ್, ಗನುದ್ದೀನ್, ಮೊಹಮ್ಮದ್ ಅಕ್ರಂ ರಾಷ್ಟ್ರಮಟ್ಟ ಹಾಗೂ ಯೂತ್ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪದಕ ಗೆದ್ದಿದ್ದಾರೆ ಎಂದು ವಿದ್ಯಾಭಾರತಿಯ ರಾಜ್ಯ ಸಂಚಾಲಕ ಚಿಂತಾಮಣಿ ಸಿಂಗ್ ತಿಳಿಸಿದ್ದಾರೆ.

**ಮುಸ್ಲಿಂ ಶಿಕ್ಷಕರೂ ಇದ್ದಾರೆ:** ಸರಸ್ವತಿ ವಿದ್ಯಾಮಂದಿರದಲ್ಲಿ 1 ರಿಂದ 12ರ ತನಕ ತರಗತಿಗಳಿದ್ದು, ಈ ಶಾಲೆಗಳಲ್ಲಿ ಮುಸ್ಲಿಂ ಸಮುದಾಯದ 4,672 ಬಾಲಕರು, 2,218 ಬಾಲಕಿಯರು ವ್ಯಾಸಂಗ ಮಾಡುತ್ತಿದ್ದಾರೆ. ವಿದ್ಯಾಭಾರತಿ ಶಾಲೆ ಇತ್ತೀಚೆಗೆ 8 ಮಂದಿ ಮುಸ್ಲಿಂ ಶಿಕ್ಷಕರನ್ನೂ ನೇಮಕ ಮಾಡಿಕೊಂಡಿದೆ. ಬೇರೆ ಶಿಕ್ಷಣ ಸಂಸ್ಥೆಗಳಿಗೆ ಹೋಲಿಸಿದರೆ ಕಡಿಮೆ ಶುಲ್ಕಕ್ಕೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದು, ಈ ಕಾರಣದಿಂದ ಎಲ್ಲ ಧರ್ಮದ ಮಕ್ಕಳು ಈ ಶಾಲೆಗಳಿಗೆ ಸೇರುತ್ತಿದ್ದಾರೆ ಎಂದು ಚಿಂತಾಮಣಿ ತಿಳಿಸಿದರು.

ಇದು ಕೇವಲ ಉತ್ತರ ಪ್ರದೇಶಕ್ಕೆ ಸೀಮಿತವಲ್ಲ. ಆರೆಸ್ಸೆಸ್ ದೇಶದಾದ್ಯಂತ ನಡೆಸುವ ಚಟುವಟಿಕೆಗಳಲ್ಲಿ ಮುಸ್ಲಿಮರು, ಕ್ರಿಶ್ಚಿಯನ್ನರು ಸೇರಿದಂತೆ ಎಲ್ಲ ಮತ, ಪಂಗಡಗಳ ಜನರು ಜೋಡಿಕೊಂಡಿದ್ದಾರೆ.

# ಮಲೇಷ್ಯಾದಲ್ಲಿ ನೇತಾಜಿ ಕಂಚಿನ ಪ್ರತಿಮೆ



ಮಲೇಷ್ಯಾದಲ್ಲಿರುವ ಇಂಡಿಯನ್ ಕಲ್ಚರಲ್ ಸೆಂಟರ್‌ನಲ್ಲಿ ಸ್ವಾತಂತ್ರ್ಯ ಹೋರಾಟಗಾರ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಕಂಚಿನ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಜೂನ್ 18ರಂದು ಈ ಪ್ರತಿಮೆ ಅನಾವರಣಗೊಂಡಿದ್ದು, ಈ ವೇಳೆ ಬೋಸ್ ಹುಟ್ಟುಹಾಕಿದ್ದ ಐಎನ್‌ಎಯ 9 ಸದಸ್ಯರು ಹಾಗೂ ಝಾನ್ಸಿರಾಣಿ ತುಕಡಿಯ ಸದಸ್ಯರು ಹಾಜರಿದ್ದರು. ರಸಮ್ಮಾ ಭೂಪಾಲನ್ ಸೇರಿದಂತೆ ನಾಲ್ಕು ಜನರು ವಿಡಿಯೋ ಕಾನ್ಫರೆನ್ಸ್ ಮೂಲಕ ಕಾರ್ಯಕ್ರಮದಲ್ಲಿ ಭಾಗಿಯಾದರು. 2010ರಲ್ಲಿ ಉದ್ಘಾಟನೆಗೊಂಡಿದ್ದ ಇಂಡಿಯನ್ ಕಲ್ಚರಲ್ ಸೆಂಟರ್‌ಗೆ ಕಳೆದ ವರ್ಷ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು ಇದನ್ನು 'ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡಿಯನ್ ಕಲ್ಚರಲ್ ಸೆಂಟರ್' ಎಂದು ಮರುನಾಮಕರಣ ಮಾಡುವುದಾಗಿ ಘೋಷಣೆ ಮಾಡಿದ್ದರು. ಮಲೇಷ್ಯಾದಲ್ಲಿ 20 ಲಕ್ಷಕ್ಕೂ ಅಧಿಕ ಭಾರತ ಮೂಲದ ನಾಗರಿಕರು ವಾಸವಾಗಿದ್ದಾರೆ.

# ಎದೆ ಎತ್ತರಕ್ಕೆ ಬೆಳದ ಮಕ್ಕಳನ್ನು ಸೇನೆಗೆ ಸೇರಿಸುವ ಆದರ್ಶ ಗ್ರಾಮ!



ಮಗ ಅಥವಾ ಮಗಳು ಎದೆ ಎತ್ತರಕ್ಕೆ ಬೆಳೆದಾಗ ಪೋಷಕರಿಗೆ ಅವರ ಮದುವೆ ಮಾಡಿಸುವ ಜವಾಬ್ದಾರಿ ಹೆಗಲೇರಿರುತ್ತೆ. ಆದರೆ ಮಧ್ಯಪ್ರದೇಶದ ಬೆತೂಲ್ ಜಿಲ್ಲೆಯ ಅಂಧಾರಿಯಾ ಗ್ರಾಮದ ಪೋಷಕರಿಗೆ ಬೆಳೆದು ನಿಂತ ತಮ್ಮ ಮಕ್ಕಳನ್ನು ಸೇನೆಗೆ ಸೇರಿಸುವ ತವಕ.

ಭಾರತೀಯ ಸೇನೆಗೆ ಒಂದೇ ಗ್ರಾಮದ ಅತೀ ಹೆಚ್ಚು ಯುವಕರನ್ನು ಸೇರಿಸಿದ ಕೀರ್ತಿ ಆಮ್ಲಾ ತಾಲ್ಲೂಕಿನ ಅಂಧಾರಿಯಾ ಗ್ರಾಮಕ್ಕೆ ಸಲ್ಲುತ್ತದೆ. ಈ ಗ್ರಾಮದ ಜನಸಂಖ್ಯೆ 2 ಸಾವಿರದಷ್ಟಿದ್ದು, ಗ್ರಾಮದ ಸುಮಾರು 500 ಯುವಕ, ಯುವತಿಯರು ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇನ್ನೂ ಸಂತಸದ ಸಂಗತಿ ಎಂದರೆ ಅಂಧಾರಿಯಾ ಗ್ರಾಮದ ಹಿರಿಯರು ತಮ್ಮ ಹೆಣ್ಣುಮಕ್ಕಳನ್ನೂ ಸಹ ಸೇನೆಗೆ ಸೇರಿಸಲು ಉತ್ಸುಕರಾಗಿದ್ದಾರೆ. ಯುವತಿಯರು ಸೇನೆಗೆ ಸೇರಿ ದೇಶಸೇವೆ ಮಾಡಲಿ ಎಂಬ ಬಯಕೆ ಈ ಗ್ರಾಮಸ್ಥರದ್ದು. ಇದೇ ಕಾರಣಕ್ಕೆ ಅಂಧಾರಿಯಾ ಗ್ರಾಮದ ಪ್ರತೀ ಮನೆಯಿಂದ ಕನಿಷ್ಠ ಒಬ್ಬರಾದರು ಯೋಧರಾಗಿ ಗಡಿ ಕಾಯುವ ಕಾಯಕದಲ್ಲಿ ನಿರತರಾಗಿದ್ದಾರೆ.

ಈ ಗ್ರಾಮದಲ್ಲಿ ತಮ್ಮ ಮಕ್ಕಳನ್ನು ಸೇನೆಗೆ ಸೇರಿಸುವ ತವಕ ಎಷ್ಟಿದೆ ಎಂದರೆ, ಕಲಾವತಿ ಭಾಯಿ ಎಂಬ ಹುತಾತ್ಮ ಯೋಧನ ಪತ್ನಿ ತನ್ನ ಒಬ್ಬಳೇ ಮಗಳನ್ನು ಸೇನೆಗೆ ಸೇರಿಸುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ. ಅಲ್ಲದೇ ಸೇನೆಗೆ ಸೇರಬಯಸುವ ಯುವಕ ಯುವತಿಯರಿಗೆ ವಿಶೇಷ ತರಬೇತಿ ವ್ಯವಸ್ಥೆಯನ್ನು ಗ್ರಾಮಸ್ಥರು ಮಾಡಿದ್ದಾರೆ.

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.
ಚಂದಾ/ನವೀಕರಣ/ವಿಳಾಸ ಬದಲಾವಣೆಗಾಗಿ ಸಂಪರ್ಕಿಸಿ : #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–04. ಮೊಬೈಲ್: 97391 83021 ಸಂಪಾದಕೀಯ : 97312 64009